ಸರ್ಕಾರದ ಆದೇಶ ಸಂಖ್ಯೆ : ಆಕುಕ 383 ಪಿಟಿಡಿ 2012, ಬೆಂಗಳೂರು, ದಿನಾಂಕ : 06–01–2015.

ಕಲಬುರಗಿ ತಾಲ್ಲೂಕಿನ ಹೀರಾಪುರ ಗ್ರಾಮದ ಸರ್ವೆ ನಂ. 16/1 ರಲ್ಲಿ 4.30 ಎಕರೆ ವಿಸ್ತೀರ್ಣದ ಜಮೀನಿನಲ್ಲಿ 01 ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಕಟ್ಟಡ ನಿರ್ಮಾಣ ಮಾಡಲು ನೀಲಿ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ, ಬೆಂಗಳೂರು ಇವರು ಪಡೆಯತಕ್ಕದ್ದು.

2015–16ನೇ ಸಾಲಿನಿಂದ 02 ವರ್ಷದ ಅವಧಿಯ ಡಿ–ಫಾರ್ಮ ಕೋರ್ಸನ್ನು ಮತ್ತು 04 ವರ್ಷ ಅವಧಿಯ ಬಿ–ಫಾರ್ಮ ಕೋರ್ಸನ್ನು ಪ್ರಾರಂಭಿಸತಕ್ಕದ್ದು ಹಾಗೂ ಡಿ–ಫಾರ್ಮ ಮತ್ತು ಬಿ–ಫಾರ್ಮ ಕೋರ್ಸುಗಳ ವಾರ್ಷಿಕ ಪ್ರವೇಶಮಿತಿಯನ್ನು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ ಅನುಮತಿಯೊಂದಿಗೆ ಮಿತಿಗೊಳಿಸತಕ್ಕದ್ದು.

ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ ಇದರ ಕಾರ್ಯ ನಿರ್ವಹಣೆಗೆ ಬೋಧಕ ಮತ್ತು ಬೋಧಕೇತರ ಒಟ್ಟು 158 ವಿವಿಧ ವೃಂದಗಳಿಗೆ ಸೇರಿದ ಹುದ್ದೆಗಳನ್ನು **(ಅನುಬಂಧದಲ್ಲಿರುವಂತೆ)** ಈ ಕೂಡಲೇ ಜಾರಿಗೆ ಬರುವಂತೆ ಸೃಜಿಸಲಾಗಿದೆ. ಈ ಹುದ್ದೆಗಳನ್ನು ಔಷಧ ನಿಯಂತ್ರಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗನುಸಾರ ಮತ್ತು ಅಗತ್ಯಕ್ಕನುಗುಣವಾಗಿ ತುಂಬತಕ್ಕದ್ದು.

ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಕಲಬುರಗಿ ಇದರ ಸಿಬ್ಬಂದಿ ಮತ್ತು ನಿರ್ವಹಣಾ ವೆಚ್ಚವನ್ನು ಲೆಕ್ಕಶೀರ್ಷಿಕೆ 4210–04–200–1–04 ಉತ್ತರ ಕರ್ನಾಟಕದಲ್ಲಿ ಸರ್ಕಾರಿ ಫಾರ್ಮಸಿ ಕಾಲೇಜು ಶೀರ್ಷಿಕೆಯಡಿ 132 ಬಂಡವಾಳ ವೆಚ್ಚಗಳು ಹಾಗೂ ನಿರ್ಮಾಣ ವೆಚ್ಚದಡಿ ಒದಗಿಸಿರುವ ಅನುದಾನದಲ್ಲಿ ನಿಯಮಾನುಸಾರ ಭರಿಸತಕ್ಕದ್ದು.

2014–15ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4210–04–200–104 ಉತ್ತರ ಕರ್ನಾಟಕದಲ್ಲಿ ಸರ್ಕಾರಿ ಫಾರ್ಮಸಿ ಕಾಲೇಜು ಶೀರ್ಷಿಕೆಯಡಿ 132 ಬಂಡವಾಳ ವೆಚ್ಚ ರೂ. 10.00 ಲಕ್ಷಗಳು, 386–ನಿರ್ಮಾಣ ರೂ. 65.90 ಲಕ್ಷಗಳು 422–ಪರಿಶಿಷ್ಟ ಜಾತಿ ಉಪಯೋಜನೆ ರೂ. 17.15 ಲಕ್ಷಗಳು ಹಾಗೂ 423–ಗಿರಿಜನ ಉಪಯೋಜನೆ ರೂ. 6.95 ಲಕ್ಷಗಳು ಹೀಗೆ ಒಟ್ಟಾರೆ ರೂ. 100.00 ಲಕ್ಷಗಳ ಅನುದಾನವನ್ನು ಕಟ್ಟಡ ನಿರ್ಮಾಣಕ್ಕಾಗಿ ಉಪಯೋಗಿಸತಕ್ಕದ್ದು.

ಈ ಆದೇಶವನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಭಾ.ವೈ.ಪ. ಮತ್ತು ಸಮನ್ವಯ).

ಸರ್ಕಾರಿ ಆದೇಶ ಸಂಖ್ಯೆ : ಆಕುಕ 383 ಪಿಟಿಡಿ 2012, ಬೆಂಗಳೂರು, ದಿನಾಂಕ : 06–01–2015ಕ್ಕೆ ಅನುಬಂಧ

Sl. No	Designation and Pay Scale	No. of posts to be created
1	Principal 37400-67000+AGP Rs.l 0,000/-	1
2	Professors 37400-67000+AGP Rs. 9,000/-	12 Pharmacognosy-02 Pharmaceutics-02 Pharmacology-02 Pharmaceutical Chemistry -03 Pharmacy Practice -01 Regulatory Affairs-02
3	Assistant Professors (Associate Professors) 37400-67000+AGP Rs .8000/-	20 Pharmacognosy-04 Pharmaceutics -05 Pharmacology-03 Pharmaceutical Chemistry-05 Pharmacy Practice-03
4.	Lecturers 15600-39100+AGP Rs. 6,000/-	42 Pharmacognosy-05 Pharmaceutics-12 Pharmacology-08 Pharmaceutical Chemistry -12 Pharmacy Practice -05
5	Gazetted Assistant 21600-40050	1
6	Superintendent 20000-36300	2
7	Jr. Engineer 17650-32000	1
8	First Division Assistant 14550-26700	8
9	Computer Operator 14550-26700	8
10	Librarian 14550-26700	2
11	Store Keeper 14550-26700	2
12	Second Division Assistant 11600-21000	8
13	Typist 11600-21000	8
14	Lab Technician(Drugs) 16000-29600	2
15	Lab-Technician 14550-26700	10

Sl. No	Designation and Pay Scale	No. of posts to be created
16	Lab Attenders 10400-16400	20
17	Peon 9600-14550	8
18	Gardener 9600-14550	2
19	Animal House Keeper 9600-14550	1
	Total	**158**

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ. ಮತ್ತು ಸಮನ್ವಯ).

P.R. 107

SC-100

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : 2013–14ನೇ ಕಬ್ಬು ನುರಿಸುವ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಬೆಳೆದ ರೈತರು ಸರಬರಾಜು ಮಾಡುವ ಪ್ರತಿ ಟನ್ ಕಬ್ಬಿಗೆ ರೂ. 150/– ಹೆಚ್ಚುವರಿ ಪ್ರೋತ್ಸಾಹ ಧನವನ್ನು ರಾಜ್ಯದ ರೈತರಿಗೆ ಪಾವತಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಸಿಐ 288 ಎಸ್‌ಜಿಎಫ್ 2013, ದಿನಾಂಕ : 07–01–2014.
2. ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಇವರ ಪತ್ರ ಸಂಖ್ಯೆ : ಡಿಎಸ್‌ಕೆ/ಎಸ್‌ಟಿಟಿ/86/2013–14, ದಿನಾಂಕ : 02–08–2014, 09–10–2014 ಮತ್ತು 02–01–2015

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 7–1–2014ರ ಸರ್ಕಾರದ ಆದೇಶದಲ್ಲಿ 2013–14ನೇ ಕಬ್ಬು ನುರಿಸುವ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಬೆಳೆದ ರೈತರು ಸರಬರಾಜು ಮಾಡಿದ ಪ್ರತಿ ಟನ್ ಕಬ್ಬಿಗೆ ರೂ. 150/– ಹೆಚ್ಚುವರಿ ಪ್ರೋತ್ಸಾಹ ಧನವನ್ನು ರಾಜ್ಯದ ರೈತರಿಗೆ ಕೆಲವು ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲಾಗಿದೆ.

2) ಮೇಲೆ (2)ರಲ್ಲಿ ಓದಲಾದ ಪತ್ರಗಳಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಮನವಿ ಸಲ್ಲಿಸಿ ಅವರ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವ ರೈತರಿಗೂ ಸಹ ಇತರ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನೀಡಿರುವಂತೆ ಪ್ರತಿ ಟನ್ ಕಬ್ಬಿಗೆ ರೂ. 150/– ಹೆಚ್ಚುವರಿ ಪ್ರೋತ್ಸಾಹ ಧನ ಮಂಜೂರು ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ವಿವರಗಳನ್ನು ಸಲ್ಲಿಸಿರುತ್ತಾರೆ.

3) ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಸಲ್ಲಿಸಿರುವಂತೆ ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇದು ಖಂಡಸಾರಿ ಮ್ಯಾನುಫ್ಯಾಕ್ಚರಿಂಗ್ ಲೈಸೆನ್ಸಿಂಗ್ ಆರ್ಡರ್, 1980ರ ಪ್ರಕಾರ ಸ್ಥಾಪಿತವಾದ ಖಂಡಸಾರಿ ಘಟಕವಾಗಿರುತ್ತದೆ. ಈ ಕಾರ್ಖಾನೆಗೆ 2013–14ನೇ ಸಾಲಿನಲ್ಲಿ ರೈತರು 82,127 ಮೆಟ್ರಿಕ್ ಟನ್ ಕಬ್ಬು ಸರಬರಾಜು ಮಾಡಿರುತ್ತಾರೆ. ಇದಕ್ಕೆ ಪ್ರತಿ ಟನ್ ಕಬ್ಬಿಗೆ ರೂ. 150/–ರಂತೆ ಒಟ್ಟು ಹೆಚ್ಚುವರಿ ಪ್ರೋತ್ಸಾಹ ಧನ ರೂ. 1,23,19,050/– ಆಗುತ್ತದೆಂದು ತಿಳಿಸಿರುತ್ತಾರೆ.

4) ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮಂಜೂರಾದಂತೆ 2013–14ನೇ ಕಬ್ಬು ನುರಿಸುವ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಬೆಳೆದ ರೈತರು ಸರಬರಾಜು ಮಾಡುವ ಪ್ರತಿ ಟನ್ ಕಬ್ಬಿಗೆ ರೂ. 150/– ಹೆಚ್ಚುವರಿ ಪ್ರೋತ್ಸಾಹ ಧನವನ್ನು ಕೃಷಿ ಇಲಾಖೆಯು ಒಟ್ಟು ರೂ. 58,706/– ಲಕ್ಷ ಮೊತ್ತದ ಅನುದಾನವನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಇವರಿಗೆ ಬಿಡುಗಡೆ ಮಾಡಿರುತ್ತದೆ. ಈ ಪೈಕಿ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ರೂ. 563,87,64,900/– ಮೊತ್ತದ ಅನುದಾನವನ್ನು ವಿವಿಧ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ ನಂತರ ರೂ. 9,84,75,806/– ಅನುದಾನ ಉಳಿದಿರುತ್ತದೆಂದು ಮೇಲೆ (2) ರಲ್ಲಿ ಓದಲಾದ ಪತ್ರಗಳಲ್ಲಿ ತಿಳಿಸಿರುತ್ತಾರೆ.

5) ಮೇಲೆ ಹೇಳಿದಂತೆ ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಗೆ 2013–14ನೇ ಸಾಲಿನಲ್ಲಿ ರೈತರು ಸರಬರಾಜು ಮಾಡಿದ ಕಬ್ಬಿಗೆ ಹೆಚ್ಚುವರಿ ಪ್ರೋತ್ಸಾಹ ಧನ ಪಾವತಿಸಲು ಪ್ರತ್ಯೇಕ ಅನುದಾನ ಲಭ್ಯವಿರುವುದಿಲ್ಲ. ಆದುದರಿಂದ ಈ ಸಂಬಂಧ ಅಗತ್ಯವಿರುವ ಮೊತ್ತವನ್ನು ಮೇಲೆ ಹೇಳಿದಂತೆ ಈಗ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಇವರ ಬಳಿ ಲಭ್ಯವಿರುವ ಉಳಿತಾಯದ ಅನುದಾನದಲ್ಲಿ ಪಾವತಿಸಬೇಕಾಗುತ್ತದೆ. ಹಾಗೂ ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಂತೆ ಬಾಕಿಯನ್ನು ನೀಡಲು ಬೇರೆ ಯಾವುದೇ ಅನುದಾನವನ್ನು ಒದಗಿಸಲು ಬರುವುದಿಲ್ಲ. ಹಾಗೂ ಈ ಉದ್ದೇಶಕ್ಕಾಗ ನೀಡಬೇಕಾದ ಮೊತ್ತವನ್ನು ಸರ್ಕಾರವು ಪೂರ್ಣವಾಗಿ ಬಿಡುಗಡೆ ಮಾಡಿರುವುದರಿಂದ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಅವರ ಬಳಿ ಉಳಿದಿರುವ ಅನುದಾನ ಬಿಡುಗಡೆ ಮಾಡಲಾದ ಉದ್ದೇಶಕ್ಕೆ

ಅವಶ್ಯವಿಲ್ಲ ಎಂದು ತೀರ್ಮಾನಿಸಿದಲ್ಲಿ, ಈ ಆದೇಶದಲ್ಲಿ ಸೂಚಿಸಿರುವ ಹಣವನ್ನು ಖಂಡಸಾರಿ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ಪಾವತಿಸಲು ಬಳಸಬಹುದು. ಯಾವುದೇ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹಣ ಪಾವತಿಸಲು ಈ ಸರ್ಕಾರಿ ಆದೇಶದನ್ವಯ ಸರ್ಕಾರದಿಂದ ಹೆಚ್ಚುವರಿ ಹಣ ಬಿಡುಗಡೆ ಮಾಡಲು ಸಾಧ್ಯ ಆಗುವುದಿಲ್ಲ. ಹಾಗೂ ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವ ರೈತರ ಹೆಸರು, ಗುರುತಿನ ಸಂಖ್ಯೆ, ಬ್ಯಾಂಕ್ ಖಾತೆ, ಬ್ಯಾಂಕ್ ಖಾತೆಗೆ ಸದರಿ ಕಾರ್ಖಾನೆಯವರು ಪಾವತಿಸಿರುವ ಮೊತ್ತ, ಕಬ್ಬಿನ ಪ್ರಮಾಣ ಈ ಮಾಹಿತಿಗಳನ್ನು ಸದರಿ ಕಾರ್ಖಾನೆಯವರಿಂದ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ಪಡೆದುಕೊಂಡು ರೈತರು ಕಬ್ಬು ಬೆಳೆಯುತ್ತಿರುವ ಕ್ಷೇತ್ರದ ವಿಸ್ತೀರ್ಣ, ಉತ್ಪಾದಿಸಿದ ಕಬ್ಬಿನ ಪ್ರಮಾಣ ಈಗಾಗಲೇ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ್ದಲ್ಲಿ ಅದರ ಪ್ರಮಾಣ, ಉಳಿದಿರುವ ಕಬ್ಬಿನ ಪ್ರಮಾಣ, ಎಲ್ಲವನ್ನು ಖಚಿತಪಡಿಸಿಕೊಂಡು ಕರ್ನಾಟಕ ರಾಜ್ಯದ ರೈತರಿಗೆ ಮೇಲೆ (1)ರಲ್ಲಿ ಓದಲಾದ ದಿನಾಂಕ : 7–1–2014ರ ಆದೇಶದಲ್ಲಿನ ಷರತ್ತುಗಳಿಗೆ ಒಳಪಟ್ಟು ಪಾವತಿಸಬೇಕಾಗಿರುತ್ತದೆ. ಅದರಂತೆ ಪ್ರಸ್ತಾವನೆಯನ್ನು ಪರಿಗಣಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 248 ಎಸ್‌ಜಿಎಫ್ 2014, ಬೆಂಗಳೂರು, ದಿನಾಂಕ : 14ನೇ ಜನವರಿ 2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2013–14ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಲ್ಲಿ ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಗೆ ಕರ್ನಾಟಕ ರಾಜ್ಯದ ರೈತರು ಸರಬರಾಜು ಮಾಡಿದ ಪ್ರತಿ ಟನ್ ಕಬ್ಬಿಗೆ ರೂ. 150/– ಹೆಚ್ಚುವಿರ ಪ್ರೋತ್ಸಾಹ ಧನವನ್ನು ಈ ಕೆಳಗಿನ ಷರತ್ತುಗಳಿಗೊಳಪಟ್ಟು ನೀಡಲು ಮಂಜೂರಾತಿ ನೀಡಿದೆ.

1. ಸರ್ಕಾರದ ಆದೇಶ ಸಂಖ್ಯೆ : ಸಿಐ 288 ಎಸ್‌ಜಿಎಫ್ 2013, ದಿನಾಂಕ : 7–1–2014ರಲ್ಲಿನ ಷರತ್ತುಗಳನ್ನು ಚಾಚೂ ತಪ್ಪದೆ ಪಾಲಿಸತಕ್ಕದ್ದು.
2. ಸರ್ಕಾರದ ಆದೇಶ ಸಂಖ್ಯೆ : ಸಿಐ 288 ಎಸ್‌ಜಿಎಫ್ 2013, ದಿನಾಂಖ : 7–1–2014ರಂತೆ ಬಿಡುಗಡೆ ಮಾಡಬೇಕಾದ ಮೊತ್ತವನ್ನು ಸರ್ಕಾರವು ಪೂರ್ಣವಾಗಿ ಬಿಡುಗಡೆ ಮಾಡಿರುವುದರಿಂದ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಅವರು ಉಳಿದಿರುವ ಬಾಕಿ ಹಣವನ್ನು ಬಿಡುಗಡೆ ಮಾಡಲಾದ ಉದ್ದೇಶಕ್ಕೆ ಅವಶ್ಯವಿಲ್ಲ ಎಂದು ತೀರ್ಮಾನಿಸಿದಲ್ಲಿ, ಈ ಆದೇಶದಲ್ಲಿ ಸೂಚಿಸಿರುವಂತೆ ಹಣವನ್ನು ಖಂಡಸಾರಿ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ಪಾವತಿಸಲು ಬಳಸಬಹುದು.
3. ಈ ವೆಚ್ಚವನ್ನು ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ : ಸಿಐ 288 ಎಫ್‌ಜಿಎಫ್ 2013, ದಿನಾಂಕ : 7–1–2014ರಲ್ಲಿ ಮಂಜೂರಾದಂತೆ ಕೃಷಿ ಇಲಾಖೆಯು ಬಿಡುಗಡೆ ಮಾಡಿರುವ ರೂ. 58,706/– ಲಕ್ಷ ಮೊತ್ತದ ಪೈಕಿ ವಿವಿಧ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿ ಪ್ರಸ್ತುತ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಇವರ ಬಳಿ ಉಳಿದಿರುವ ಅನುದಾನದಿಂದ ಭರಿಸತಕ್ಕದ್ದು.
4. ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ 2013–14ನೇ ಕಬ್ಬು ನುರಿಸುವ ಹಂಗಾಮಿನಲ್ಲಿ ನುರಿಸಿದ ಕಬ್ಬಿನ ಪ್ರಮಾಣದ ವಿವರಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ (1) ರಂತೆ ಭರ್ತಿ ಮಾಡಿ ದೃಢೀಕರಿಸಿ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ಜಿಲ್ಲಾಧಿಕಾರಿಯವರು ಲಗತ್ತಿಸಿರುವ ಅನುಬಂಧ (2)ರಂತೆ ರೈತರು ಕಬ್ಬು ಬೆಳೆಯುತ್ತಿರುವ ಕ್ಷೇತ್ರದ ವಿಸ್ತೀರ್ಣ, ಉತ್ಪಾದಿಸಿದ ಕಬ್ಬಿನ ಪ್ರಮಾಣ, ಈಗಾಗಲೇ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ್ದಲ್ಲಿ ಅದರ ಪ್ರಮಾಣ, ಉಳಿದಿರುವ ಕಬ್ಬಿನ ಪ್ರಮಾಣ, ಎಲ್ಲವನ್ನು ಖಚಿತಪಡಿಸಿಕೊಂಡ ನಂತರವೇ ಅನುದಾನ ಬಿಡುಗಡೆಗೆ ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
5. ಆಯುಕ್ತರು, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಿಕೊಂಡು ಅನುದಾನ ಬಿಡುಗಡೆ ಮಾಡತಕ್ಕದ್ದು.

2) ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 1190 ವೆಚ್ಚ–1/14, ದಿನಾಂಕ : 6–12–2014ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಈ. ಶಿವರುದ್ರಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ (ಸಕ್ಕರೆ),

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ : ಸಿಐ 248 ಎಸ್‌ಜಿಎಫ್ 2014, ಬೆಂಗಳೂರು, ದಿನಾಂಕ : 14ನೇ ಜನವರಿ 2015ಕ್ಕೆ

ಅನುಬಂಧ–1

2013–14ನೇ ಕಬ್ಬು ನುರಿಸುವ ಹಂಗಾವಿನಲ್ಲಿ ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಗೆ ಕರ್ನಾಟಕ ರಾಜ್ಯದ ರೈತರು ಸರಬರಾಜು ಮಾಡಿದ ಪ್ರತಿ ಟನ್ ಕಬ್ಬಿಗೆ ಹೆಚ್ಚುವರಿ ಪ್ರೋತ್ಸಾಹ ಧನ ನೆರವು ಯೋಜನೆ ಅಡಿ ರೂ. 150/– ರಂತೆ ಪಾವತಿಸಬೇಕಾದ ಮೊತ್ತ

ಕಾರ್ಖಾನೆ ಹೆಸರು ಮತ್ತು ವಿಳಾಸ : ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಕ್ರ.ಸಂ.	ಕಬ್ಬು ಸರಬರಾಜು ಮಾಡಿದ ರೈತನ ಹೆಸರು ಮತ್ತು ವಿಳಾಸ	ರೈತನ ಗುರುತಿನ ಸಂಖ್ಯೆ	2013–14ನೇ ಸಾಲಿನಲ್ಲಿ ಖಂಡಸಾರಿ ಸಕ್ಕರೆ ಕಾರ್ಖಾನೆಗೆ ಸರಬರಾಜು ಮಾಡಿದ ಕಬ್ಬಿನ ಪ್ರಮಾಣ (ಮೆ.ಟನ್‌ಗಳಲ್ಲಿ)	ಖಂಡಸಾರಿ ಸಕ್ಕರೆ ಕಾರ್ಖಾನೆ ರೈತರಿಗೆ ನೀಡಿರುವ ಕಬ್ಬಿನ ದರ ಪ್ರತಿ ಟನ್ನಿಗೆ	ಖಂಡಸಾರಿ ಸಕ್ಕರೆ ಕಾರ್ಖಾನೆ ರೈತರ ಬ್ಯಾಂಕ್ ಖಾತೆಗೆ ಪಾವತಿಸಿರುವ ಮೊತ್ತ ರೂ. ಗಳಲ್ಲಿ	ರೈತನ ಬ್ಯಾಂಕ್ ಖಾತೆಯ ವಿವರ (ಖಾತೆ ಸಂಖ್ಯೆ/ಬ್ಯಾಂಕಿನ ವಿಳಾಸ)	ಷರಾ
1	2	3	4	5	6	7	8

ವ್ಯವಸ್ಥಾಪಕ ನಿರ್ದೇಶಕರು

ಅನುಬಂಧ–2

2013–14ನೇ ಕಬ್ಬು ನುರಿಸುವ ಹಂಗಾಮಿನಲ್ಲಿ ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಗೆ ಕರ್ನಾಟಕ ರಾಜ್ಯದ ರೈತರು ಸರಬರಾಜು ಮಾಡಿದ ಪ್ರತಿ ಟನ್ ಕಬ್ಬಿಗೆ ಹೆಚ್ಚುವರಿ ಪ್ರೋತ್ಸಾಹ ಧನ ನೆರವು ಯೋಜನೆ ಅಡಿ ರೂ. 150/– ರಂತೆ ಪಾವತಿಸಬೇಕಾದ ಮೊತ್ತ

ಕಾರ್ಖಾನೆ ಹೆಸರು ಮತ್ತು ವಿಳಾಸ : ಮೆ॥ ಬ್ರಹ್ಮಾನಂದ ಸಾಗರ ಜಾಗರಿ ಇಂಡಸ್ಟ್ರೀಸ್, ಅಳಗವಾಡಿ, ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ.

ಕ್ರ.ಸಂ.	ಕಬ್ಬು ಸರಬರಾಜು ಮಾಡಿದ ರೈತರ ಹೆಸರು ಮತ್ತು ವಿಳಾಸ	ರೈತನ ಗುರುತಿನ ಸಂಖ್ಯೆ	ಕಬ್ಬು ಬೆಳೆದ ಕ್ಷೇತ್ರದ ವಿಸ್ತೀರ್ಣ (ಆರ್.ಟಿ.ಸಿ. ಪಡೆಯುವುದು) ಎಕರೆ–ಗುಂಟೆ	2013–14ನೇ ಸಾಲಿನಲ್ಲಿ ಉತ್ಪಾದಿಸಿದ ಒಟ್ಟು ಕಬ್ಬಿನ ಪ್ರಮಾಣ (ಮೆ. ಟನ್ ಗಳಲ್ಲಿ)	2013–14ನೇ ಸಾಲಿನಲ್ಲಿ ಖಂಡಸಾರಿ ಕಾರ್ಖಾನೆಗೆ ಸರಬರಾಜು ಮಾಡಿದ ಕಬ್ಬಿನ ಪ್ರಮಾಣ (ಮೆ. ಟನ್ ಗಳಲ್ಲಿ)	2013–14ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ)	ಖಂಡಸಾರಿ ಸಕ್ಕರೆ ಕಾರ್ಖಾನೆ ಯವರು ಹಣ ಪಾವತಿಸಿರುವ ರೈತರ ಬ್ಯಾಂಕ್ ಖಾತೆಗಳ ವಿವರ ಹಾಗೂ ದರ	ಈಗ ಪ್ರತಿ ಟನ್ ಕಬ್ಬಿಗೆ ರೂ. 150 ರಂತೆ ಪಾವತಿಸ ಬೇಕಾದ ಹೆಚ್ಚುವರಿ ಪ್ರೋತ್ಸಾಹ ಧನದ ಮೊತ್ತ
1	2	3	4	5	6	7	8	9

P.R. 108

SC-100

ಜಿಲ್ಲಾಧಿಕಾರಿ

ಕಾನೂನು ಸಚಿವಾಲಯ

ವಿಷಯ : ದಾವಣಗೆರೆ ಕಂದಾಯ ತಾಲ್ಲೂಕಿನಲ್ಲಿ ಖಾಲಿಯಿರುವ ನೋಟರಿ ಹುದ್ದೆಯನ್ನು ತುಂಬುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಲಾ 193 ಎಲ್‌ಸಿಎಲ್ 2013, ದಿನಾಂಕ : 08–04–2014.
2. ಸರ್ಕಾರದ ಸಮ ಸಂಖ್ಯೆಯ ಪತ್ರದ ದಿನಾಂಕ : 13–08–2014.
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಇವರ ಪತ್ರ ಸಂಖ್ಯೆ : ಡಿಜೆ.ಡಿವಿಜಿ. 7203/2014, ದಿನಾಂಕ : 03–09–2014.
4. ಸರ್ಕಾರದ ಸಮ ಸಂಖ್ಯೆಯ ಪತ್ರದ ದಿನಾಂಕ : 16–09–2014.
5. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ದಾವಣಗೆರೆ ಇವರ ಪತ್ರ ಸಂಖ್ಯೆ : ಡಿಜೆ. ಡಿವಿಜಿ. 9760/2014, ದಿನಾಂಕ : 07–11–2014.
6. ಸರ್ಕಾರದ ಅಧಿಸೂಚನೆ ಸಂಖ್ಯೆ : ಲಾ 61 ಎಲ್‌ಸಿಎಲ್ 2009, ದಿನಾಂಕ : 14–07–2010.
7. ಸರ್ಕಾರದ ಸಮ ಸಂಖ್ಯೆಯ ಸಂದರ್ಶನ ಸಭಾ ಸೂಚನಾ ಪತ್ರದ ದಿನಾಂಕ : 28–11–2014.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಶ್ರೀ ಕೆ.ಎನ್. ನಾರಪ್ಪ, ನೋಟರಿ, ದಾವಣಗೆರೆ ಕಂದಾಯ ತಾಲ್ಲೂಕು ದಾವಣಗೆರೆ ಜಿಲ್ಲೆ ಇವರು ನೋಟರಿ ಕರ್ತವ್ಯವನ್ನು ನಿರ್ವಹಿಸದೆ ಲೋಪವೆಸಗಿರುವುದು ರುಜುವಾತಾದ ಕಾರಣ ನೋಟರಿ ನಿಯಮಗಳು 1956ರ ನಿಯಮ 13(12)(ಬಿ)(1) ರನ್ವಯ ಇವರ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗಿದೆ ಹಾಗೂ ಶಾಶ್ವತವಾಗಿ ನೋಟರಿ ನೇಮಕಾತಿ ಆಗದಂತೆ ತಡೆಹಿಡಿಯಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಸಮಸಂಖ್ಯೆಯ ಪತ್ರದಲ್ಲಿ ದಾವಣಗೆರೆ ಕಂದಾಯ ತಾಲ್ಲೂಕಿನಲ್ಲಿ ಖಾಲಿಯಿರುವ ನೋಟರಿ ಹುದ್ದೆಯನ್ನು ತುಂಬುವ ಕುರಿತಂತೆ ಅಭಿಪ್ರಾಯ ಸಲ್ಲಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ದಾವಣಗೆರೆ ಇವರನ್ನು ಕೋರಲಾಗಿತ್ತು. ಆ ಮೇರೆಗೆ ಕ್ರಮಸಂಖ್ಯೆ (3)ರ ಪತ್ರದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ನೀಡಿರುವ ವರದಿಯಂತೆ ಶ್ರೀ ಕೆ.ಎನ್. ನಾರಪ್ಪ, ನೋಟರಿ, ದಾವಣಗೆರೆ, ದಾವಣಗೆರೆ ಕಂದಾಯ ತಾಲ್ಲೂಕಿನ ನೋಟರಿ ಹುದ್ದೆಯಿಂದ ತೆರವಾದ ಖಾಲಿ ಹುದ್ದೆಯನ್ನು ತುಂಬುವುದು ಅವಶ್ಯಕತೆಯಿದೆಯೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ದಾವಣಗೆರೆ ಕಂದಾಯ ತಾಲ್ಲೂಕು (ದಾವಣಗೆರೆ ಜಿಲ್ಲೆ) ಇಲ್ಲಿ ಖಾಲಿಯಿರುವ ನೋಟರಿ ಹುದ್ದೆಯನ್ನು ತುಂಬುವ ಕುರಿತಂತೆ ನೋಟರಿಗಳ ಅಧಿನಿಯಮ/ನಿಯಮಗಳು 1956 ನಿಯಮ 6(1)(2) ಮತ್ತು 7(1)(2)(3) ರನ್ವಯ ಮತ್ತು ತಿದ್ದುಪಡಿ ನಿಯಮಗಳನ್ವಯ ಅಧಿಸೂಚನೆ ಹೊರಡಿಸಿ ಸ್ಥಳೀಯ ಜಾಹೀರಾತು ನೀಡಿ ಆ ಮೂಲಕ ಸ್ವೀಕರಿಸುವ ಅರ್ಜಿಗಳನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರ ನಿಯಮ 12ರನ್ವಯ ಪರಿಶೀಲಿಸಿ ಅವರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಲಾಗಿತ್ತು. ಆ ಮೇರೆಗೆ ಕ್ರಮ ಸಂಖ್ಯೆ (5)ರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪತ್ರದಲ್ಲಿ 7 ವಕೀಲರುಗಳ ಮೆಮೋರಿಯಲ್‌ಗಳನ್ನು ಅವರ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಸರ್ಕಾರಿ ಅಧಿಸೂಚನೆಯಲ್ಲಿ ಕೇಂದ್ರ ಅಧಿನಿಯಮದ section 15 ರಲ್ಲಿ (1951 ಅಧಿನಿಯಮ 53) ಓದಲಾದ ನೋಟರಿಗಳ ತಿದ್ದುಪಡಿ ನಿಯಮಗಳು ಹಾಗೂ 2009ರ ನೋಟರಿಗಳ (ತಿದ್ದುಪಡಿ) ನಿಯಮಗಳ ನಿಯಮ 7 (a)2 ರನ್ವಯ ನೋಟರಿ ಹುದ್ದೆಯ ನೇಮಕಾತಿ ಆಯ್ಕೆಗೆ ಸಂದರ್ಶನ ಮಂಡಳಿಯನ್ನು ರಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಪ್ರಸ್ತಾವನೆಯಲ್ಲಿ ಶಿಫಾರಸ್ಸು ಮಾಡಿರುವ ಎಲ್ಲಾ ವಕೀಲರುಗಳನ್ನು ಸಂದರ್ಶನಕ್ಕೆ ಆಹ್ವಾನಿಸಿ ದಿನಾಂಕ : 22–12–2014ರಂದು ನಡೆದ ಸಂದರ್ಶನ ಮಂಡಳಿಯಲ್ಲಿ ಶ್ರೀ ಕೆ. ಸೈಯದ್ ಖಾದರ್, ವಕೀಲರು, ಇವರನ್ನು ದಾವಣಗೆರೆ ಕಂದಾಯ ತಾಲ್ಲೂಕಿನಲ್ಲಿ ಖಾಲಿಯಿರುವ ನೋಟರಿ ಹುದ್ದೆಗೆ ನೇಮಕ ಮಾಡಲು ಶಿಫಾರಸ್ಸು ಮಾಡಲಾಗಿರುತ್ತದೆ.

ಆ ಮೇರೆಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 316 ಎಲ್‌ಸಿಎಲ್ 2014, ಬೆಂಗಳೂರು, ದಿನಾಂಕ : 20–01–2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ನೋಟರಿ ಅಧಿನಿಯಮ 1952 ಹಾಗೂ ಇದರ ಅಡಿಯಲ್ಲಿ ರಚಿಸಲಾಗಿರುವ ನೋಟರಿ ನಿಯಮಗಳು, 1956ರನ್ವಯ ನಿಯಮ 8(1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಕೆ. ಸೈಯದ್ ಖಾದರ್, ವಕೀಲರು, ಸಂಖ್ಯೆ : 496, 12 ಕ್ರಾಸ್, ಬಿಎಸ್‌ಎನ್‌ಎಲ್ ಆಫೀಸ್ ಹಿಂದೆ, ಪಿ.ಬಿ. ರೋಡ್, ಶಂಕರ್ ವಿಹಾರ ಲೇಔಟ್, ದಾವಣಗೆರೆ–577006 ಇವರನ್ನು ವೃತ್ತಿ ಪ್ರಮಾಣ ಪತ್ರ ನೀಡಲಾದ ದಿನಾಂಕದಿಂದ 5 (ಐದು) ವರ್ಷಗಳ ಅವಧಿಗೆ ದಾವಣಗೆರೆ ಕಂದಾಯ ತಾಲ್ಲೂಕಿನಲ್ಲಿ ಖಾಲಿ ಇರುವ ನೋಟರಿ ಹುದ್ದೆಗೆ ನೇಮಕಾತಿ ಮಾಡಲಾಗಿದೆ.

ಸದರಿ ವಕೀಲರು ಲೆಕ್ಕಶೀರ್ಷಿಕೆ 0070–ಇತರೆ ಆಡಳಿತಾತ್ಮಕ ಸೇವೆಗಳು–01–ನ್ಯಾಯ ಪರಿಪಾಲನೆ 501–0–ಇತರೆ ಸ್ವೀಕೃತಿಗಳು–06 ಇತರೆ ಬಾಬ್ತುಗಳಿಗೆ (0070–01–501–0–06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ. 1000.00 (ಒಂದು ಸಾವಿರಗಳು ಮಾತ್ರ) ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮಾ ಮಾಡಿ ಆ ಬಗೆಗಿನ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ಅವರಿಗೆ ವೃತ್ತಿ ಪ್ರಮಾಣ ಪತ್ರವನ್ನು ನೀಡಲಾಗುವುದು.

ವೃತ್ತಿ ಪ್ರಮಾಣ ಪತ್ರ ನೀಡಿದ ನಂತರ ಶ್ರೀಯುತರ ಹೆಸರನ್ನು ನೋಟರಿ ಅಧಿನಿಯಮ, 1952 ಕಲಂ 4ನೇ ಪ್ರಕರಣದಡಿ ಸರ್ಕಾರ ನಿರ್ವಹಿಸುತ್ತಿರುವ ನೋಟರಿ ಪಟ್ಟಿಯಲ್ಲಿ ನಮೂದಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಯಿದಾ ಬಾನು

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾನೂನು ಇಲಾಖೆ (ಆಡಳಿತ–2).

P.R. 109

SC-25

ಇಂಧನ ಸಚಿವಾಲಯ

ವಿಷಯ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಇಎನ್ 21 ಪಿಎಸ್‌ಆರ್2012(ಪಿ–2), ದಿ:30.01.2013.
2. ಸರ್ಕಾರದ ಆದೇಶ ಸಂಖ್ಯೆ: ಇಎನ್ 40 ಪಿಎಸ್‌ಆರ್2012(ಪಿ–1), ದಿ:30.10.2013.
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 30 ವಿಎಸ್‌ಸಿ 2014, ದಿ:22.03.2014.
4. ಕೆಆರ್‌ಇಡಿಎಲ್/07/SOG/ಸೌರಶಕ್ತಿ ಯೋಜನೆಗಳು/2014/881, ದಿ:04.04.2014
5. ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರ ಪತ್ರ ಸಂಖ್ಯೆ: ಕ್ರೆಡಲ್/07/ಎಸ್‌ಒಜಿ/ಸೌರಶಕ್ತಿ ಯೋಜನೆಗಳು/2121 ದಿ:29.05.2014.
6. ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರ ಪತ್ರ ಸಂಖ್ಯೆ:KREDL/07/SOG-2/156A/2015/286 ದಿ:24.01.2015.
   2014–15ನೇ ಸಾಲಿನ ಆಯವ್ಯಯ ಕಂಡಿಕೆ ಸಂಖ್ಯೆ: 358

ಪ್ರಸ್ತಾವನೆ:

ನವೀಕರಿಸಬಹುದಾದ ಇಂಧನ ಮೂಲಗಳ ಭಾಗವಾದ ಸೋಲಾರ್ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರವು, ಆರ್ಥಿಕ ವರ್ಷ 2013–14 ರಲ್ಲಿ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್‌ಗಳನ್ನು ರೈತರಿಗೆ ಒದಗಿಸುವ ಯೋಜನೆಗೆ ಮೇಲೆ ಓದಲಾದ (2) ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ (1) (2) ಮತ್ತು (3) ರಂತೆ ವರ್ಷ 2012–13 ಮತ್ತು 2013–14 ರಲ್ಲಿ ಸೌರಶಕ್ತಿ ಮೇಲ್ಛಾವಣಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನೇಮಿತ ಸಂಸ್ಥೆಯಾಗಿರುವ ಕ್ರೆಡಲ್, ಯೋಜನೆಯ ಬಗ್ಗೆ ಅರಿವು ಮೂಡಿಸಿ ಮತ್ತು ಇಚ್ಛೆಯುಳ್ಳ ಫಲಾನುಭವಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿತ್ತು. ಆದರೆ ಕೇವಲ ಬೆಸ್ಕಾಂನಿಂದ 7 ಫಲಾನುಭವಿಗಳಪಟ್ಟಿ ಬಂದ ಹಿನ್ನಲೆಯಲ್ಲಿ ಹಾಗೂ ಉಳಿದ ವಿತರಣಾ ಕಂಪನಿಗಳಿಂದ ಯಾವುದೇ ಪಟ್ಟಿ ಬರದೇ ಇದ್ದ ಕಾರಣ ಹಾಗೂ ಆಯ್ಕೆಯಾದ ನಗರಗಳಲ್ಲಿ ನಿರಂತರ ವಿದ್ಯುತ್ ಸರಬರಾಜು ಇರುವುದರಿಂದ ಸಾರ್ವಜನಿಕರು ಈ ಘಟಕಗಳನ್ನು ಅಳವಡಿಸಿಕೊಳ್ಳಲು ಆಸಕ್ತಿ ವಹಿಸದೇ ಇರುವುದು ಕಂಡುಬರುತ್ತದೆಯೆಂದು ಕ್ರೆಡಲ್ ಸಂಸ್ಥೆರವರು ಮೇಲೆ ಓದಲಾದ (5) ರಲ್ಲಿ ವರದಿ ಮಾಡಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸೌರಶಕ್ತಿ ಆಧಾರಿತ ಪಂಪ್‌ಗಳ ಸಹಾಯಧನಕ್ಕಾಗಿ ಹೆಚ್ಚಿನ ಬೇಡಿಕೆಗಳು ಬರುತ್ತಿದೆ ಹಾಗೂ ರೈತರಿಗೆ ಅನುಕೂಲವಾಗುವ ಹಿನ್ನಲೆಯಲ್ಲಿ 2012–13 ಮತ್ತು 2013–14ನೇ ಸಾಲಿನಲ್ಲಿ ಸೌರಶಕ್ತಿ ಮೇಲ್ಛಾವಣಿ ಯೋಜನೆಗಳಿಗೆ ಬಿಡುಗಡೆಯಾದ ರೂ. 2 ಕೋಟಿ ಹಾಗೂ ರೂ. 3 ಕೋಟಿ, ಒಟ್ಟು ರೂ. 5.00 ಕೋಟಿ ಮೊತ್ತವನ್ನು ಹಾಗೂ ಮೇಲೆ ಓದಲಾದ (7)ರಲ್ಲಿ 2014–15ರಲ್ಲಿ ಹಂಚಿಕೆಯಾದ ರೂ.20 ಕೋಟಿ ಪೂರ್ಣ ಹಣವನ್ನು ಸೌರಶಕ್ತಿ ಆಧಾರಿತ ಪಂಪ್ ಯೋಜನೆಗೆ ನಿಯೋಜನೆ ಮಾಡಲು ಮೇಲೆ ಓದಲಾದ (5) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್‌ರವರು ಕೋರಿರುತ್ತಾರೆ. 2013–14 ರಲ್ಲಿ ಸೌರಶಕ್ತಿ ಆಧಾರಿತ ಪಂಪ್ ಯೋಜನೆಗೆ ಬಿಡುಗಡೆಯಾದ ರೂ. 4.00 ಕೋಟಿ ಮೊತ್ತವನ್ನು ಸೇರಿಸಿ ಒಟ್ಟು ಮೊತ್ತ ರೂ. 29.00 ಕೋಟಿಗಳಾಗುತ್ತದೆ. ಒಂದು 5.0 ಹೆಚ್.ಪಿ ಸಾಮರ್ಥ್ಯದ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ (ಬ್ಯಾಟರಿ ರಹಿತ) ಗೆ ಅಂದಾಜು ಬೆಲೆಯು ರೂ.6,25,000/–ಗಳಾಗಿರುತ್ತದೆ. ಇದರ ಅಂದಾಜಿನಂತೆ ಸರ್ಕಾರದ ವಂತಿಗೆ ಹಾಗೂ ಫಲಾನುಭವಿಗಳ ವಂತಿಗೆ ಈ ಕೆಳಗಿನಂತಿರುತ್ತದೆ.

ಕ್ರ. ಸಂ	ವರ್ಗ	ಕೇಂದ್ರ ಸರ್ಕಾರದ (ಎಂ.ಎನ್. ಆರ್.ಇ) ವಂತಿಗೆ (ರೂಗಳಲ್ಲಿ)	ರಾಜ್ಯ ಸರ್ಕಾರದ ವಂತಿಗೆ (ರೂಗಳಲ್ಲಿ)	ಫಲಾನುಭವಿಗಳ ವಂತಿಗೆ (ರೂಗಳಲ್ಲಿ)	ಬ್ಯಾಟರಿ ರಹಿತ ಒಂದು ಸೌರಶಕ್ತಿ ಪಂಪ್‌ನ ಒಟ್ಟು ಅಂದಾಜು ವೆಚ್ಚ (ರೂ ಗಳಲ್ಲಿ)
1	ಸಾಮಾನ್ಯ ವರ್ಗ	187500	337500	100000	6,25,000
2	ಪರಿಶಿಷ್ಟ ಜಾತಿ		437500	–	
3	ಪರಿಶಿಷ್ಟಪಂಗಡ		437500	–	

ರಾಜ್ಯ ಸರ್ಕಾರದ ವಂತಿಗೆ ರೂ. 29,00,00,000/– ಗಳನ್ನು ವರ್ಗಾವಾರು(ಸಾಮಾನ್ಯ ವರ್ಗ–76%, ಪರಿಶಿಷ್ಟ ಜಾತಿ–17.15% ಹಾಗೂ ಪರಿಶಿಷ್ಟ ಪಂಗಡ–6.85%) ವಿಂಗಡಿಸಿ ಹಂಚಿಕೆ ಮಾಡಿದ್ದು, ಸಾಮಾನ್ಯ ವರ್ಗ–ರೂ. 22,04,00,000/–, ಪರಿಶಿಷ್ಟ ಜಾತಿ–ರೂ. 4,97,35,000/– ಹಾಗೂ ಪರಿಶಿಷ್ಟ ಪಂಗಡ– ರೂ. 1,98,65,000/– ಗಳನ್ನು ನೀಡಬೇಕಾಗುತ್ತದೆ. ಆದರೆ ಇದೇ ಕ್ರಮದಲ್ಲಿ ಘಟಕಗಳ ಅನುಷ್ಠಾನಕ್ಕೆ ಹಾಗೂ ಪರಿವೀಕ್ಷಣಾ ವೆಚ್ಚಕ್ಕೆ ಹಂಚಿಕೆ ಮಾಡದೇ ಇರುವುದಕ್ಕಾಗಿ ಸಾಮಾನ್ಯ ವರ್ಗದವರ ವಂತಿಗೆಯಲ್ಲಿ ಶೇಕಡಾವಾರು ಕಡಿಮೆಮಾಡಿದ್ದು, ವರ್ಗಾವಾರು ವಿಂಗಡನೆ ಪೂರ್ಣಾಂಕಕ್ಕೆ ತಂದಾಗ ಈ ಕೆಳಗಿನಂತಿರುತ್ತದೆ.

ಕ್ರ. ಸಂ	ವರ್ಗ	ಫಲಾನುಭವಿಗಳ ಸಂಖ್ಯೆ	ಕೇಂದ್ರ ಸರ್ಕಾರದ ವಂತಿಗೆ(30%) ರೂಗಳಲ್ಲಿ	ಫಲಾನುಭವಿಗಳ ವಂತಿಗೆ ರೂಗಳಲ್ಲಿ	ರಾಜ್ಯ ಸರ್ಕಾರದ ವಂತಿಗೆ (ಪರಿವೀಕ್ಷಣಾ ವೆಚ್ಚ ಹೊರತು ಪಡಿಸಿ) ರೂಗಳಲ್ಲಿ	ಶೇಕಡಾವಾರು ರಾಜ್ಯ ಸರ್ಕಾರದ ವಂತಿಗೆ	ಯೋಜನಾ ವೆಚ್ಚ (ಪರಿವೀಕ್ಷಣಾ ವೆಚ್ಚವನ್ನು ಹೊರತುಪಡಿಸಿ) ರೂಗಳಲ್ಲಿ
	1	**2**	**3**	**4**	**5**	**6=5/(288700000)**	**7**
1	ಸಾಮಾನ್ಯ ವರ್ಗ	648	121500000	64800000	219100000	75.89%	405400000

2	ಪರಿಶಿಷ್ಟ ಜಾತಿ	114	21375000	0	49735000	17.22%	71110000
3	ಪರಿಶಿಷ್ಟ ಪಂಗಡ	46	8625000	0	19865000	6.88%	28490000
Total		**808**	**151500000**	**64800000**	**288700000**		**505000000**

ರಾಜ್ಯ ಸರ್ಕಾರದ ರೂ. 29,00,00,000/–ಅನುದಾನ, ಕೇಂದ್ರ ಸರ್ಕಾರದ (ಎಂ.ಎನ್.ಆರ್.ಇ) ರೂ. 15,15,00,000/– ಸಹಾಯಧನ ಹಾಗೂ ಫಲಾನುಭವಿಗಳ ವಂತಿಗೆ ರೂ. 6,48,00,000/– ಗಳೊಂದಿಗೆ ಅಂದಾಜು ಯೋಜನಾ ವೆಚ್ಚವು ರೂ. 50,50,00,000/– ಗಳಾಗಿರುತ್ತದೆ. ಘಟಕಗಳ ಪರಿವೀಕ್ಷಣಾ ವೆಚ್ಚಕ್ಕಾಗಿ ರಾಜ್ಯ ಸರ್ಕಾರದ ವಂತಿಗೆಯಲ್ಲಿ ರೂ. 13,00,000/– ಮೀಸಲಿರಿಸಲಾಗಿದೆ. ಪರಿವೀಕ್ಷಣಾ ವೆಚ್ಚವನ್ನೊಳಗೊಂಡ ಅಂದಾಜು ಯೋಜನಾ ವೆಚ್ಚವು ರೂ. 50,63,00,000/– ಗಳಾಗಿರುತ್ತದೆ. ಈ ಯೋಜನಾ ವೆಚ್ಚದಲ್ಲಿ ಅಂದಾಜು 808 ಘಟಕಗಳನ್ನು ಅಳವಡಿಸಬಹುದಾಗಿದೆ.

ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವುದರಿಂದ ಹಾಗೂ ಪ್ರಸ್ತಾಪಿತ ಪಂಪ್‌ಸೆಟ್‌ಗಳ ಸಂಖ್ಯೆಯು ಕಡಿಮೆ ಇರುವುದರಿಂದ ಸದರಿ ವರ್ಷದಲ್ಲಿ ಈ ಯೋಜನೆಯನ್ನು ಅಫಜಲಪುರ, ಗೋಕಾಕ್, ಮುದ್ದೇಬಿಹಾಳ್, ಕೊಳ್ಳೇಗಾಲ, ರಾಮನಗರ, ಚನ್ನಪಟ್ಟಣ ಮತ್ತು ಕನಕಪುರ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

ಮೇಲೆ ಓದಲಾದ (6) ರ ಕ್ರೆಡಲ್ ಪತ್ರದಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 5225 ಸಂಖ್ಯೆಯ ಪಂಪ್‌ಸೆಟ್ ಅಳವಡಿಸಲು ಅನುಮೋದನೆ ನೀಡಿರುತ್ತದೆ ಹಾಗೂ ಇದುವರೆಗೆ ರೂ. 1459.29 ಲಕ್ಷ ಅನುದಾನ ನೀಡಲು ಅನುಮೋದನೆ ನೀಡಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಅನುದಾನವನ್ನು ಕ್ರೆಡಲ್ ಕೇಂದ್ರದಿಂದ ಪಡೆಯಲು ಕ್ರಮ ವಹಿಸುವುದು. ಎಂ.ಎನ್.ಆರ್.ಇ. ಯಿಂದ ಬರುವ ಅನುದಾನವು ಅಂದಾಜು ಶೇಕಡಾ 30ಕ್ಕಿಂತ ಕಡಿಮೆಯಾದಲ್ಲಿ ವ್ಯತ್ಯಾಸದ ಹಣವನ್ನು ಆಯಾ ಫಲಾನುಭವಿಗಳೇ ಭರಿಸಬೇಕಾಗಿರುತ್ತದೆ.

ಮೇಲೆ ಓದಲಾದ (2) ಮತ್ತು (3) ರಂತೆ, ಈಗಾಗಲೇ ರೈತರಿಗೆ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ನೀಡುವ ಯೋಜನೆಯನ್ನು ಕ್ರೆಡಲ್ ಸಂಸ್ಥೆ ಹಾಗೂ ವಿತರಣಾ ಕಂಪನಿಗಳ ಮುಖಾಂತರ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ. ಫಲಾನುಭವಿಗಳ ವಂತಿಗೆ ಮತ್ತು ಅನುಷ್ಠಾನ ಚಟುವಟಿಕೆಗಳನ್ನು ಅನುಬಂಧದಲ್ಲಿ ವಿವರಿಸಿದೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014, ಬೆಂಗಳೂರು, ದಿನಾಂಕ: 28.02.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಮುಖಾಂತರ ಅನುಷ್ಠಾನಗೊಳಿಸಲು ಯೋಜಿಸಿರುವ ವರ್ಷ 2012–13 ಮತ್ತು 2013–14 ರ ಸೌರಶಕ್ತಿ ಮೇಲ್ಛಾವಣಿ ಯೋಜನೆಯ ಅನುದಾನವಾದ ರೂ. 5 ಕೋಟಿಗಳನ್ನು ಹಾಗೂ ವರ್ಷ 2013–14ರ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಯೋಜನೆಗಳಿಗೆ ನೀಡಿರುವ ರೂ. 4 ಕೋಟಿಗಳನ್ನು ಮತ್ತು ಆಯವ್ಯಯ 2014–15 ರಲ್ಲಿ ಸೌರಶಕ್ತಿ ಯೋಜನೆಗಳಿಗೆ ಹಂಚಿಕೆಯಾದ ರೂ.20 ಕೋಟಿಗಳಲ್ಲಿ ರೂ.17.8 ಕೋಟಿ ಒಟ್ಟಾಗಿ ಸೇರಿಸಿಕೊಂಡು, ರೂ.26.8 ಕೋಟಿಗಳ ರಾಜ್ಯ ಸರ್ಕಾರದ ಅನುದಾನದೊಂದಿಗೆ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಯೋಜನೆಯನ್ನು, ಅನುಬಂಧದಲ್ಲಿ ವಿವರಿಸಿರುವಂತೆ ಅನುಷ್ಠಾನಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1206 ವೆಚ್ಚ–1/2014 ದಿನಾಂಕ:16.12.2014 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 3 ಎಮ್ ಸಿ ಎಮ್ 2014 ದಿನಾಂಕ:28.07.2014 ರ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು KTPP ಅಧಿನಿಯಮದನ್ವಯ ಮುಂದಿನ ಕ್ರಮ ಜರುಗಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಲ್.ರಾಮಚಂದ್ರ

ಸರ್ಕಾರದ ಉಪ ಕಾರ್ಯದರ್ಶಿ

ಇಂಧನ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿನಾಂಕ: 28.02.2015 ಕ್ಕೆ ಹೊಂದಿಕೊಂಡಿರುವ ಅನುಬಂಧ

ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳ ಅನುಷ್ಠಾನಗೊಳಿಸುವ ಯೋಜನೆ:

1. ಈ ಯೋಜನೆಯಡಿಯಲ್ಲಿ, ಸೌರಶಕ್ತಿ ಪಂಪ್‌ಸೆಟ್‌ಗಳನ್ನು ಹೊಸದಾಗಿ ಸಂಪರ್ಕಗಳನ್ನು ಹೊಂದುವ ರೈತರಿಗೆ ಮಾತ್ರ ಲಭ್ಯವಾಗುತ್ತದೆ. ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದ ನಿಯಮಗಳ ಪ್ರಕಾರ ಒದಗಿಸಲಾಗುವ ಒಂದು 5 ಹೆಚ್.ಪಿ. ಸೌರಶಕ್ತಿ ಪಂಪ್‌ಸೆಟ್(ಬ್ಯಾಟರಿ ರಹಿತ) ನ ಅಂದಾಜು ಬೆಲೆಯು ರೂ.6,25,000/–ಗಳಾಗಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.

ಕ್ರ ಸಂ	ವರ್ಗ	ಕೇಂದ್ರ ಸರ್ಕಾರದ (ಎಂ.ಎನ್. ಆರ್.ಇ) ವಂತಿಗೆ (ರೂಗಳಲ್ಲಿ)	ರಾಜ್ಯ ಸರ್ಕಾರದ ವಂತಿಗೆ (ರೂಗಳಲ್ಲಿ)	ಫಲಾನುಭವಿಗಳ ವಂತಿಗೆ (ರೂಗಳಲ್ಲಿ)	ಒಂದು ಘಟಕದ ಒಟ್ಟು ವೆಚ್ಚ(ರೂಗಳಲ್ಲಿ)
1	ಸಾಮಾನ್ಯ ವರ್ಗ	187500	337500	100000	6,25,000/–
2	ಪರಿಶಿಷ್ಟ ಜಾತಿ		437500	–	
3	ಪರಿಶಿಷ್ಟಪಂಗಡ		437500	–	

2. **ಯೋಜನೆಯ ವರ್ಗವಾರು ವಿಂಗಡಣೆಯ ವಿವರಗಳು ಈ ಕೆಳಕಂಡಂತಿರುತ್ತದೆ:**

ಕ್ರ ಸಂ	ವರ್ಗ	ಫಲಾನುಭವಿಗಳ ಸಂಖ್ಯೆ	ಕೇಂದ್ರ ಸರ್ಕಾರದ ವಂತಿಗೆ(30%) ರೂಗಳಲ್ಲಿ	ಫಲಾನುಭವಿಗಳ ವಂತಿಗೆ ರೂಗಳಲ್ಲಿ	ರಾಜ್ಯ ಸರ್ಕಾರದ ವಂತಿಗೆ(ಪರಿವೀಕ್ಷಣಾ ವೆಚ್ಚ ಹೊರತು ಪಡಿಸಿ) ರೂಗಳಲ್ಲಿ *	ಶೇಕಡಾವಾರು ರಾಜ್ಯ ಸರ್ಕಾರದ ವಂತಿಗೆ	ಯೋಜನಾ ವೆಚ್ಚ (ಪರಿವೀಕ್ಷಣಾ ವೆಚ್ಚವನ್ನು ಹೊರತುಪಡಿಸಿ) ರೂಗಳಲ್ಲಿ
	1	**2**	**3**	**4**	**5**	**6=5/(288700000)**	**7**
1	ಸಾಮಾನ್ಯ ವರ್ಗ	648	121500000	64800000	219100000	75.89%	405400000
2	ಪರಿಶಿಷ್ಟ ಜಾತಿ	114	21375000	0	49735000	17.22%	71110000
3	ಪರಿಶಿಷ್ಟ ಪಂಗಡ	46	8625000	0	19865000	06.88%	28490000
Total		**808**	**151500000**	**64800000**	**288700000**		**505000000**

* ರಾಜ್ಯ ಸರ್ಕಾರದ ವರ್ಷ 2014–15 ರ ಅನುದಾನವನ್ನು ರೂ.17.8 ಕೋಟಿಗೆ ಸೀಮಿತಗೊಳಿಸಿದೆ.

3. **ಪ್ರತಿ ಪಂಪ್‌ಸೆಟ್‌ಗೆ ಆಗುವ ಅಂದಾಜು ವೆಚ್ಚ ಮತ್ತು ಇಂಧನ ಉಳಿತಾಯದ ವಿವರ:**

ವ್ಯಾಟ್ ಸಾಮರ್ಥ್ಯ	5 ಹೆಚ್.ಪಿ
MNRE ಪ್ರಕಾರ ಪ್ರತಿ ಸ್ಥಾವರಕ್ಕೆ ತಗಲುವ ಅಂದಾಜು ವೆಚ್ಚ ರೂಗಳಲ್ಲಿ.	ರೂ.6,25,000/–
ಅಂದಾಜು ವಿದ್ಯುತ್ ಉಳಿತಾಯ ದೈನಿಕ (kWh)	25 ಯೂನಿಟ್
ಒಂದು ಯೂನಿಟ್ (kWh) ಗೆ ತಗಲುವ ವೆಚ್ಚ	ರೂ.4.50/–
ದೈನಂದಿನ ಉಳಿತಾಯ ರೂಗಳಲ್ಲಿ	ರೂ.112.50/–
ವಾರ್ಷಿಕ ಉಳಿತಾಯ ರೂಗಳಲ್ಲಿ	ರೂ.33,750/–

4. ರಾಜ್ಯ ಸರ್ಕಾರದ ರೂ. 29,00,00,000/–ಅನುದಾನ, ಕೇಂದ್ರ ಸರ್ಕಾರದ (ಎಂ.ಎನ್.ಆರ್.ಇ) ರೂ. 15,15,00,000/– ಸಹಾಯಧನ ಹಾಗೂ ಫಲಾನುಭವಿಗಳ ವಂತಿಗೆ ರೂ. 6,48,00,000/– ಗಳೊಂದಿಗೆ ಅಂದಾಜು ಯೋಜನಾ ವೆಚ್ಚವು ರೂ. 50,50,00,000/– ಗಳಾಗಿರುತ್ತದೆ. ಘಟಕಗಳ ಪರಿವೀಕ್ಷಣಾ ವೆಚ್ಚಕ್ಕಾಗಿ ರಾಜ್ಯ ಸರ್ಕಾರದ ವಂತಿಗೆಯಲ್ಲಿ ರೂ. 13,00,000/– ಮೀಸಲಿರಿಸಲಾಗಿದೆ. ಪರಿವೀಕ್ಷಣಾ ವೆಚ್ಚವನ್ನೊಳಗೊಂಡ ಅಂದಾಜು ಯೋಜನಾ ವೆಚ್ಚವು ರೂ. 50,63,00,000/– ಗಳಾಗಿರುತ್ತದೆ. ಈ ಯೋಜನಾ ವೆಚ್ಚದಲ್ಲಿ ಅಂದಾಜು 808 ಘಟಕಗಳನ್ನು ಅಳವಡಿಸಬಹುದಾಗಿದೆ.

5. **ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಸ್ಥಳಗಳು:**

ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವುದರಿಂದ ಹಾಗೂ ಪ್ರಸ್ತಾಪಿತ ಪಂಪ್‌ಸೆಟ್‌ಗಳ ಸಂಖ್ಯೆಯು ಕಡಿಮೆ ಇರುವುದರಿಂದ ಸದರಿ ವರ್ಷದಲ್ಲಿ ಈ ಯೋಜನೆಯನ್ನು ಅಫಜಲಪುರ, ಗೋಕಾಕ್, ಮುದ್ದೇಬಿಹಾಳ್, ಕೊಳ್ಳೇಗಾಲ, ರಾಮನಗರ, ಚನ್ನಪಟ್ಟಣ ಮತ್ತು ಕನಕಪುರ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ವಿವರಗಳು ಕೆಳಕಂಡಂತಿವೆ:

ಕ್ರಮ ಸಂಖ್ಯೆ	**ವಿದ್ಯುತ್ ವಿತರಣಾ ಕಂಪನಿ**	**ತಾಲ್ಲೂಕು**	**ಸೌರ ಪಂಪ್‌ಸೆಟ್‌ಗಳ ಸಂಖ್ಯೆ**
1	ಜೆಸ್ಕಾಂ	ಅಫಜಲಪುರ	150
2	ಹೆಸ್ಕಾಂ	ಗೋಕಾಕ್	150
3	ಹೆಸ್ಕಾಂ	ಮುದ್ದೇಬಿಹಾಳ್	150
4	ಸೆಸ್ಕ್	ಕೊಳ್ಳೇಗಾಲ (ಕೊಳ್ಳೇಗಾಲ ಕ್ಷೇತ್ರ–75 ಸಂಖ್ಯೆ ಹಾಗೂ ಹನೂರು ಕ್ಷೇತ್ರ–75 ಸಂಖ್ಯೆ)	150
5	ಬೆಸ್ಕಾಂ	ರಾಮನಗರ	75
6	ಬೆಸ್ಕಾಂ	ಚನ್ನಪಟ್ಟಣ	75
7	ಬೆಸ್ಕಾಂ	ಕನಕಪುರ	57
		ಒಟ್ಟು	**807**

ಒಂದು ಪಂಪ್‌ಸೆಟ್‌ನ್ನು ಬೆಸ್ಕಾಂ ವ್ಯಾಪ್ತಿಯಲ್ಲಿ ಇಲಾಖೆ ವತಿಯಿಂದ ಪ್ರಾಯೋಗಿಕವಾಗಿ ಅಳವಡಿಸಲಾಗುವುದು.

6. **ಅನುಷ್ಠಾನ ಕಾರ್ಯಚಟುವಟಿಗಳು:**

ಸಹಾಯಧನದ ಹಂಚಿಕೆ ಹಾಗೂ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, ಅನುಷ್ಠಾನಗೊಳಿಸುವ ಸಂಸ್ಥೆಯನ್ನು ಗುರುತಿಸುವ ಹೊಣೆಗಾರಿಕೆಯು ಕೆ.ಆರ್.ಇ.ಡಿ.ಎಲ್ ಸಂಸ್ಥೆಯಾದ್ದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯ ಮೂಲಕ ಅನುಷ್ಠಾನಗೊಳಿಸುವ ಸಂಸ್ಥೆಯನ್ನು ನಿಯೋಜಿಸಲಾಗುವುದು. ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಸ್ಥೆಯು ಸೋಲಾರ್ ಪ್ಯಾನಲ್ ಹಾಗೂ ಪಂಪ್‌ಗಳನ್ನು ಎಂ.ಎನ್.ಆರ್.ಇ ಮಾರ್ಗಸೂಚಿಗಳ ಅನುಸಾರ ಸ್ಥಾಪಿಸಬೇಕಾಗಿರುತ್ತದೆ ಹಾಗೂ ಖಾತರಿ ಅವಧಿಯಲ್ಲಿ ಬಿಡಿ ಭಾಗಗಳನ್ನು ಬದಲಾಯಿಸುವುದು ಮತ್ತು ಸಿಸ್ಟಮ್‌ಗಳನ್ನು ಸುಗಮವಾಗಿ ನಿರ್ವಹಿಸುವ ಜವಾಬ್ದಾರಿ ಅನುಷ್ಠಾನಗೊಳಿಸುವ ಸಂಸ್ಥೆಯದಾಗಿರುತ್ತದೆ.

7. **ಕ್ರೆಡಲ್ ಪಾತ್ರ :**

ಕೆ.ಆರ್.ಇ.ಡಿ.ಎಲ್. ಸಂಸ್ಥೆ ಈ ಕೆಳಕಂಡ ಚಟುವಟಿಗಳನ್ನು ಖಾತರಿ ಪಡಿಸಿಕೊಳ್ಳಬೇಕಾಗಿರುತ್ತದೆ.

I. ಮೇಲೆ ತಿಳಿಸಿರುವ ಹಾಗೆ 2012-13, 2013-14 ಮತ್ತು 2014-15 ಸಾಲಿನ ಅನುದಾನಗಳನ್ನು ಒಟ್ಟಾರೆ ಸೇರಿಸಿ ಸೌರಶಕ್ತಿ ಆಧಾರಿತ ಪಂಪ್ ಯೋಜನೆಗಳನ್ನು ಕೆ.ಆರ್.ಇ.ಡಿ.ಎಲ್ ಸಂಸ್ಥೆಯಿಂದ ಟೆಂಡರ್‌ನ್ನು ಆಹ್ವಾನಿಸುವುದು.

II. ಅನುಷ್ಠಾನಗೊಳಿಸುವ ಸಂಸ್ಥೆಯನ್ನು ಆಯ್ಕೆ ಮಾಡುವಾಗ ಪಾರದರ್ಶಕತೆಯನ್ನು ನಿರ್ವಹಿಸುವುದು.

III. ವಿತರಣಾ ಕಂಪನಿಗಳು(ESCOM) ಸಲ್ಲಿಸಿದ ಪಟ್ಟಿಯನ್ನು ಕೆಆರ್ಇಡಿಎಲ್ ಸಂಸ್ಥೆಯು ಅಂತಿಮಗೊಳಿಸುವುದು ಹಾಗೂ ಅನುಷ್ಠಾನಗೊಳಿಸುವ ಸಂಸ್ಥೆಗೆ ನೀಡುವುದು.

IV. ಕ್ರೆಡಲ್ ಸಂಸ್ಥೆಯಿಂದ ಕೇಂದ್ರ ಸರ್ಕಾರದ ಎಂ.ಎನ್.ಆರ್.ಇ ಯಿಂದ ಸಹಾಯಧನ ಪಡೆಯಲು ಕ್ರಮ ಕೈಗೊಳ್ಳುವುದು.

V. ಎಂ.ಎನ್.ಆರ್.ಇ. ಯಿಂದ ಬರುವ ಅನುದಾನವು ಅಂದಾಜು ಶೇಕಡಾ 30ಕ್ಕಿಂತ ಕಡಿಮೆಯಾದಲ್ಲಿ ವ್ಯತ್ಯಾಸದ ಹಣವನ್ನು ಆಯಾ ಫಲಾನುಭವಿಗಳಿಂದಲೇ ಪಡೆಯಲು ಕ್ರಮ ಕೈಗೊಳ್ಳುವುದು.

VI. ಅಂದಾಜಿಸಿದ ಪ್ರತಿ ಘಟಕದ ವೆಚ್ಚ ರೂ.6,25,000/- ಗಳಿಗಿಂತ ಟೆಂಡರ್‌ನಲ್ಲಿ ಪ್ರತಿ ಘಟಕಗಳ ವೆಚ್ಚ ಕಡಿಮೆ ಬಂದಲ್ಲಿ ವ್ಯತ್ಯಾಸದ ಹಣವನ್ನು ಫಲಾನುಭವಿಗಳಿಗೆ ಅವರುಗಳ ವಂತಿಗೆಗೆ ಸೀಮಿತಗೊಳಿಸಿ ಬಿಡುಗಡೆ ಮಾಡುವುದು.

VII. ವಿತರಣಾ ಕಂಪನಿಗಳು (ESCOM) ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಸರ್ಟಿಫಿಕೇಟ್ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದ ನಂತರ ಅನುಷ್ಠಾನಗೊಳಿಸುವ ಸಂಸ್ಥೆಗೆ ಹಣ ಬಿಡುಗಡೆ ಮಾಡುವುದು.

8. **ವಿತರಣಾ ಕಂಪನಿಗಳ(ESCOM) ಪಾತ್ರ :**

ವಿತರಣಾ ಕಂಪನಿಗಳು(ESCOM) ಕಾರ್ಯಕ್ರಮದ ನಿರ್ವಾಹಕರಾಗಿದ್ದು, ಈ ಕೆಳಕಂಡ ಚಟುವಟಿಗಳನ್ನು ಖಾತರಿ ಪಡಿಸಿಕೊಳ್ಳಬೇಕಾಗಿರುತ್ತದೆ.

i. ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗ ಅಭಿವೃದ್ಧಿ ನಿಗಮ, ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಂದ ಇಚ್ಛೆಯುಳ್ಳ ಫಲಾನುಭವಿಗಳನ್ನು ಆಯ್ಕೆ ಮಾಡಿ ಸದರಿ ಫಲಾನುಭವಿಗಳ ವಂತಿಗೆಯೊಂದಿಗೆ ಸಿದ್ಧಪಡಿಸಿದ ಪಟ್ಟಿಯನ್ನು ಕೆಆರ್ಇಡಿಎಲ್ ಸಂಸ್ಥೆಗೆ ಕಳುಹಿಸಿಕೊಡುವುದು. ಮೊದಲು ಅರ್ಜಿಯನ್ನು ಸಲ್ಲಿಸಿದ ಫಲಾನುಭವಿಗಳಿಗೆ ಮೊದಲ ಆದ್ಯತೆ ನೀಡಿ ಆಯ್ಕೆ ಮಾಡುವುದು (first come first serve basis).

ii. ಫಲಾನುಭವಿಯು ಈ ಯೋಜನೆಯ ಲಾಭವನ್ನು ಪಡೆಯುವಂತೆ ಖಾತರಿ ಪಡಿಸಿಕೊಳ್ಳುವುದು.

iii. ಅನುಷ್ಠಾನಗೊಳಿಸುವ ಸಂಸ್ಥೆಯ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ತಪಾಸಣೆ ಇದರ ಜವಾಬ್ದಾರಿಯಾಗಿರುತ್ತದೆ.

iv. ಯೋಜನೆಯನ್ನು ಯುಶಸ್ವಿಯಾಗಿ ಅನುಷ್ಠಾನಗೊಳಿಸಿದ ಸರ್ಟಿಫಿಕೇಟ್ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಕೆಆರ್ಇಡಿಎಲ್ ಸಂಸ್ಥೆಗೆ ಸಲ್ಲಿಸುವುದು.

9. **<u>ಘಟಕದ ನಿರ್ವಹಣೆ :-</u>**

i. ಈ ಘಟಕವೂ 5 ವರ್ಷ Warranty ಯನ್ನು ಹೊಂದಿರುತ್ತದೆ.

ii. ಅನುಷ್ಠಾನಗೊಳಿಸಿದ ಸಂಸ್ಥೆಯು ಪ್ರತಿ 2 ತಿಂಗಳಿಗೊಮ್ಮೆ ಯೋಜನಾ ಸ್ಥಳಕ್ಕೆ ಭೇಟಿ ನೀಡಿ ಘಟಕವೂ ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಕುರಿತಂತೆ ಕ್ರಮ ಕೈಗೊಳ್ಳುವುದು.

iii. ಘಟಕ ನಿರ್ವಹಣೆ ಕುರಿತಂತೆ 2 ತಿಂಗಳಿಗೊಮ್ಮೆ ನಿರ್ವಹಣಾ ವರದಿಯನ್ನು ಕ್ರೆಡಲ್ ಸಂಸ್ಥೆಗೆ ಸಲ್ಲಿಸುವುದು.

iv. ಫಲಾನುಭವಿಗಳು ಘಟಕದ ಕಾರ್ಯ ನಿರ್ವಹಣೆ ಕುರಿತಂತೆ ತೊಂದರೆ ಅನುಭವಿಸಿದಲ್ಲಿ, 48 ಘಂಟೆಗಳಲ್ಲಿ ಸರಬರಾಜುದಾರರು ತೊಂದರೆಯನ್ನು ನಿವಾರಿಸಬೇಕು, ಇಲ್ಲದಿದ್ದಲ್ಲಿ ವಿಳಂಬವಾದ ಪ್ರತಿ ದಿನಕ್ಕೆ ರೂ.2000/-ಗಳನ್ನು ಸರಬರಾಜುದಾರರು ದಂಡ ರೂಪದಲ್ಲಿ ಭರಿಸಬೇಕು.

ಕೆ.ಎಲ್.ರಾಮಚಂದ್ರ
ಸರ್ಕಾರದ ಉಪ ಕಾರ್ಯದರ್ಶಿ
ಇಂಧನ ಇಲಾಖೆ.

PR. 201

ಇಂಧನ ಸಚಿವಾಲಯ

ವಿಷಯ: ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ ಪ್ರತಿ ವಿದ್ಯುತ್ ವಿತರಣಾ ಕಂಪನಿಗಳ ವ್ಯಾಪ್ತಿಯಲ್ಲಿ ಬರುವ 50 ಗ್ರಾಮಗಳಲ್ಲಿ ಪ್ರತಿ ಗ್ರಾಮಕ್ಕೆ ರೂ. 5 ಲಕ್ಷ ವೆಚ್ಚದಲ್ಲಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಯೋಜನೆಯ ಅನುಷ್ಠಾನ ಕುರಿತು.

ಓದಲಾಗಿದೆ: 1. 2014-15ನೇ ಸಾಲಿನ ಆಯವ್ಯಯ ಕಂಡಿಕೆ ಸಂಖ್ಯೆ: 361.

2. ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ರವರ ಪತ್ರ ಸಂಖ್ಯೆ: EE&EC/09/PRO/F-71/2014/2129 ದಿ:30.05.2014.

<u>ಪ್ರಸ್ತಾವನೆ:</u>

ಇಂಧನ ಉಳಿತಾಯ ಹಾಗೂ ಸಂರಕ್ಷಣೆಯನ್ನು ಪ್ರೋತ್ಸಾಹಿಸುವ ಅಂಗವಾಗಿ ನಿರಂತರವಾಗಿ ಹೆಚ್ಚುತ್ತಿರುವ ಇಂಧನದ ಅಗತ್ಯಗಳು, ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಹೆಚ್ಚಿದ ಅಂತರ ಕಡಿಮೆ ಮಾಡಲು ಹಾಗೂ ಮೂಲಸೌಕರ್ಯದ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಹಾಗೂ ಈಗಿನ ಇಂಧನ ಮೂಲಗಳು ಅತಿ ವೇಗದಿಂದ ಬರಿದಾಗುತ್ತಿರವ ಕಾರಣ ಲಭ್ಯವಿರುವ ಇಂಧನ ಸಂಪನ್ಮೂಲಗಳನ್ನು ಸಂರಕ್ಷಿಸಲು, ಇಂಧನ ಸಂರಕ್ಷಣೆಯ ಬಗ್ಗೆ ಗಮನ ಹರಿಸುವುದು ಮುಖ್ಯವಾಗಿದೆ.

ಸರ್ಕಾರವು 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ ಪ್ರತಿ ವಿದ್ಯುತ್ ವಿತರಣಾ ಕಂಪನಿಗಳ ವ್ಯಾಪ್ತಿಯಲ್ಲಿ ಬರುವ 50 ಗ್ರಾಮಗಳಲ್ಲಿ ಪ್ರತಿ ಗ್ರಾಮಕ್ಕೆ ರೂ. 5 ಲಕ್ಷ ವೆಚ್ಚದಲ್ಲಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಕಾರ್ಯ ಯೋಜನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ರವರು ಮೇಲೆ ಓದಲಾದ (2)ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಯೋಜನೆಯ ವಿವರಗಳು ಈ ಕೆಳಕಂಡಂತಿದೆ:

ಕ್ರ.ಸಂ	ವಿವರಗಳು	ಬೆ.ವಿ.ಕಂ	ಹು.ವಿ.ಕಂ	ಮ.ವಿ.ಕಂ	ಚಾ.ವಿ.ಸ.ನಿ.ನಿ	ಗು.ವಿ.ಕಂ	ಒಟ್ಟು
1	ಗ್ರಾಮಗಳ ಸಂಖ್ಯೆ	50	50	50	50	50	250
2	18 ವ್ಯಾಟ್ ಎಲ್.ಇ.ಡಿ ಬೀದಿ ದೀಪಗಳ ಸಂಖ್ಯೆ (ಪ್ರತಿ ಗ್ರಾಮಕ್ಕೆ)	70	70	70	70	70	350
3	80 ವ್ಯಾಟ್ ಎಲ್.ಇ.ಡಿ ಬೀದಿ ದೀಪಗಳ ಸಂಖ್ಯೆ (ಪ್ರತಿ ಗ್ರಾಮಕ್ಕೆ)	15	15	15	15	15	75
4	ಪ್ರತಿ ವಿದ್ಯುತ್ ವಿತರಣಾ ಕಂಪನಿಗಳಲ್ಲಿ ಒಟ್ಟು ಬೀದಿ ದೀಪಗಳ ಅಳವಡಿಕೆ ಸಂಖ್ಯೆ	4250	4250	4250	4250	4250	21250
5	ಪ್ರತಿ 18 ವ್ಯಾಟ್ ಎಲ್.ಇ.ಡಿ ಬೀದಿ ದೀಪಗಳ ಅಂದಾಜು ವೆಚ್ಚ ರೂ.ಗಳಲ್ಲಿ	5000	5000	5000	5000	5000	–
6	ಪ್ರತಿ 80 ವ್ಯಾಟ್ ಎಲ್.ಇ.ಡಿ ಬೀದಿ ದೀಪಗಳ ಅಂದಾಜು ವೆಚ್ಚ ರೂ.ಗಳಲ್ಲಿ	10000	10000	10000	10000	10000	–
7	ಒಟ್ಟು ಎಲ್.ಇ.ಡಿ ದೀಪಗಳ ಅಂದಾಜು ವೆಚ್ಚ ರೂ. ಕೋಟಿಗಳಲ್ಲಿ	2.5	2.5	2.5	2.5	2.5	12.5

ಪ್ರತಿ 18/80 ವ್ಯಾಟ್ ಎಲ್.ಇ.ಡಿ ದೀಪಗಳ ಅಂದಾಜು ವೆಚ್ಚದಲ್ಲಿ ಬೀದಿ ದೀಪಗಳ ಜೋಡಣೆಗೆ ಬೇಕಾದ ಅಗತ್ಯ ಬಿಡಿ ಭಾಗಗಳು ಹಾಗೂ ಇತರೆ ದರಗಳನ್ನು ಒಳಗೊಂಡಿರುತ್ತವೆ.

ಕೆ.ಆರ್.ಇ.ಡಿ.ಎಲ್ ಸಂಸ್ಥೆಯು ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಟೆಂಡರ್ ಮುಖಾಂತರ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸುವ ಹಾಗೂ ಟೆಂಡರ್‌ನ ಮಾನದಂಡಗಳನ್ನು ರೂಪಿಸುವುದು ಮತ್ತು ಯೋಜನೆಯ ಅನುಷ್ಠಾನಗೊಳಿಸುವ ಜವಾಬ್ದಾರಿ ಹೊಂದಿರುತ್ತದೆ. ವಿದ್ಯುತ್ ವಿತರಣಾ ಕಂಪನಿಗಳು 50 ಗ್ರಾಮಗಳ ಪಟ್ಟಿಯನ್ನು ಗ್ರಾಮದ ಹೆಸರು, ಬೀದಿಯ ಹೆಸರು, ಹಾಲಿ ಇರುವ ಬೀದಿ ದೀಪಗಳ ಮಾದರಿ, ಸಾಮರ್ಥ್ಯ(wattage) ಮತ್ತು ಸಂಖ್ಯೆ, ಬೀದಿ ದೀಪದ ಆರ್.ಆರ್. ಸಂಖ್ಯೆ, ಬೀದಿ ದೀಪದ ಹಿಂದಿನ ಆರು ತಿಂಗಳ ವಿದ್ಯುತ್ ಬಿಲ್‌ನ ಪ್ರತಿ, ಇತ್ಯಾದಿ ವಿವರಗಳೊಂದಿಗೆ ಕೆ.ಆರ್.ಇ.ಡಿ.ಎಲ್ ಸಂಸ್ಥೆಗೆ ನೀಡುವುದು ಮತ್ತು ಯೋಜನೆಯ ಅನುಷ್ಠಾನ ಪೂರ್ಣಗೊಳಿಸುವವರೆಗೂ ಕೆ.ಆರ್.ಇ.ಡಿ.ಎಲ್ ಸಂಸ್ಥೆ ಮತ್ತು ಗ್ರಾಮಪಂಚಾಯಿತಿಯೊಂದಿಗೆ ಸಮನ್ವಯ ಮಾಡುವುದು.

ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 50 ಗ್ರಾಮಗಳು ಎಂದು ತಿಳಿಸಿದ್ದರೂ, ಎಲ್.ಇ.ಡಿ ವಿದ್ಯುತ್ ಬೀದಿ ದೀಪದಲ್ಲಾಗುವ ಇಂಧನ ಉಳಿತಾಯದ ಬಗ್ಗೆ ಸರಿಯಾಗಿ ತುಲನಮಾಡಲು ಸಾಧ್ಯವಾಗುವಂತೆ ಅನುಷ್ಟಾನಗೊಳಿಸುವ ಗ್ರಾಮಗಳಲ್ಲಿ ಎಲ್ಲಾ ಬೀದಿ ದೀಪಗಳನ್ನು ಎಲ್.ಇ.ಡಿ ಲ್ಯಾಂಪ್‌ನಿಂದ ಬದಲಾಯಿಸುವುದು. ಗ್ರಾಮಗಳ ಸಂಖ್ಯೆ 50ಕ್ಕಿಂತ ಕಡಿಮೆಯಾದರೂ ಅನುಷ್ಠಾನಗೊಂಡ ಗ್ರಾಮಗಳಲ್ಲಿ ಎಲ್ಲಾ ಬೀದಿ ದೀಪಗಳನ್ನು ಎಲ್.ಇ.ಡಿ ಲ್ಯಾಂಪ್ ನಿಂದ ಬದಲಾಯಿಸುವುದು ಅವಶ್ಯಕ. ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವೆಚ್ಚವು ರೂ. 2.5 ಕೋಟಿ ಹಾಗೂ ಒಟ್ಟು ವೆಚ್ಚವು ರೂ. 12.5 ಕೋಟಿಗೆ ಸೀಮಿತವಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ವಿವರವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 55 ವಿಎಸ್‌ಸಿ 2014, ಬೆಂಗಳೂರು, ದಿನಾಂಕ:13.02.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದಲ್ಲಿ ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿತರಣಾ ಕಂಪನಿಗಳು ಗುರುತಿಸಿದ ಗ್ರಾಮಗಳಲ್ಲಿನ ಎಲ್ಲಾ ಬೀದಿ ದೀಪಗಳನ್ನು 18/80 ವ್ಯಾಟ್ ಸಾಮರ್ಥ್ಯದ ಎಲ್.ಇ.ಡಿ ಲ್ಯಾಂಪ್ ಗಳಿಂದ ಬದಲಾಯಿಸುವುದಕ್ಕೆ, ಪ್ರತಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ರೂ. 2.5 ಕೋಟಿಗೆ ಮೀರದಂತೆ ಹಾಗೂ ಒಟ್ಟು ವೆಚ್ಚವು ರೂ. 12.5 ಕೋಟಿಗೆ ಮೀರದಂತೆ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ಮುಖಾಂತರ ಅನುಷ್ಠಾನಕ್ಕೆ ತರಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 674 Exp-1/2014 Dated: 21.07.14 ಹಾಗೂ ಆಇ 1240 ವೆಚ್ಚ.1/2014 ದಿನಾಂಕ: 04.02.15 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 1 ಎಮ್ ಸಿ ಎಮ್ 2014 ದಿನಾಂಕ:23.06.14 ರ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು KTPP ಅಧಿನಿಯಮದನ್ವಯ ಮುಂದಿನ ಕ್ರಮ ಜರುಗಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಲ್.ರಾಮಚಂದ್ರ

ಸರ್ಕಾರದ ಉಪ ಕಾರ್ಯದರ್ಶಿ

ಇಂಧನ ಇಲಾಖೆ.

PR. 181

ಇಂಧನ ಸಚಿವಾಲಯ

ವಿಷಯ: "ನ್ಯಾಷನಲ್ ಸೋಲಾರ್ ಮಿಷನ್" ಕಾರ್ಯಕ್ರಮದಡಿಯಲ್ಲಿ ಎನ್.ಟಿ.ಪಿ.ಸಿ. – ವಿ.ವಿ.ಎನ್.ಎಲ್ (ಎನ್‌ವಿವಿಎನ್) ಮುಖಾಂತರ ರ ಫೇಸ್–2, ಬ್ಯಾಚ್–2, ಹಂತ–1ರಲ್ಲಿ ರಾಜ್ಯಕ್ಕೆ ಸಂಭವನೀಯ ಹಂಚಿಕೆಯಾಗುವ ಸಂಯೋಜಿತ ಸೌರ ವಿದ್ಯುತ್‌ನ್ನು ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಇಎನ್ 70 ವಿಎಸ್‌ಸಿ 2013 ದಿನಾಂಕ: 02.01.2014.
2. ಸರ್ಕಾರದ ಆದೇಶ ಸಂಖ್ಯೆ: ಇಎನ್ 45 ವಿಎಸ್‌ಸಿ 2013 ದಿನಾಂಕ: 31.05.2014.
3. ಜಂಟಿ ಕಾರ್ಯದರ್ಶಿ, ಎಂಎನ್‌ಆರ್‌ಇ ರವರ ಪತ್ರ ಸಂಖ್ಯೆ: 32/8/2014–15/GSP ದಿನಾಂಕ: 03.12.2014.
4. ಸರ್ಕಾರದ ಪತ್ರ ಸಂಖ್ಯೆ: ಇಎನ್ 16 ವಿಎಸ್‌ಸಿ 2014 (P-2) ದಿನಾಂಕ: 15.12.2014.
5. ಸರ್ಕಾರದ ಪತ್ರ ಸಂಖ್ಯೆ: ಇಎನ್ 70 ವಿಎಸ್‌ಸಿ 2013 ದಿನಾಂಕ: 27.01.2015.
6. ಎಂಎನ್‌ಆರ್‌ಇ ರವರ ಪತ್ರ ಸಂಖ್ಯೆ: 32/8/2013–14/GSP/Pt-A1 ದಿನಾಂಕ: 13.02.2015.

ಪ್ರಸ್ತಾವನೆ:

ಸೌರ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗರವರು ವಿದ್ಯುತ್ ವಿತರಣಾ ಕಂಪನಿಗಳಿಗೆ ಸೌರ ವಿದ್ಯುತ್ ಅನಿವಾರ್ಯತೆಯ ನಿಗದಿಪಡಿಸಿರುವ ಗುರಿಯನ್ನು ತಲುಪಲು ಸರ್ಕಾರವು ಪರಿಷ್ಕೃತ ಸೌರ ವಿದ್ಯುತ್ ನೀತಿ 2014–21ಅನ್ನು ದಿನಾಂಕ: 22.05.2014ರಂದು ಜಾರಿಗೊಳಿಸಿದೆ. ಈ ನೀತಿಯನ್ವಯ ರಾಜ್ಯದಲ್ಲಿ ಸೌರ ವಿದ್ಯುತ್ ಯೋಜನೆಗಳನ್ನು ಅಭಿವೃದ್ಧಿಪಡಿಸಲು, ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಮೂಲಕ 2000 ಮೆ.ವ್ಯಾ ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಕೇಂದ್ರ ಸರ್ಕಾರವೂ ಸಹ ಸೌರ ವಿದ್ಯುತ್ ಉತ್ಪಾದನೆಯನ್ನು ಪ್ರೋತ್ಸಾಹಿಸಲು ನ್ಯಾಷನಲ್ ಸೋಲಾರ್ ಮಿಷನ್ ಅಡಿಯಲ್ಲಿ ರಾಜ್ಯಗಳಿಗೆ ಸೌರ ವಿದ್ಯುತ್ ಅನಿವಾರ್ಯತೆ ಗುರಿಯನ್ನು ನಿಗದಿಪಡಿಸಿರುತ್ತದೆ. ನ್ಯಾಷನಲ್ ಸೋಲಾರ್ ಮಿಷನ್ ಅಡಿಯಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಯೋಜನೆಗಳು ಸೌರ ನೀತಿ 2014–21 ರಲ್ಲಿ ನಿಗದಿಪಡಿಸಿರುವ ಗುರಿಯ ಹೊರತಾಗಿರುತ್ತದೆ.

ನ್ಯಾಷನಲ್ ಸೋಲಾರ್ ಮಿಷನ್‌ನಂತೆ ಈಗಾಗಲೇ ಮೇಲೆ ಓದಲಾದ (1)ರಲ್ಲಿ ರಾಜ್ಯಕ್ಕೆ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮ ನಿಯಮಿತ (ಎನ್.ಟಿ.ಪಿ.ಸಿ)–ವಿದ್ಯುತ್ ವ್ಯಾಪಾರ ನಿಗಮ ನಿಯಮಿತ (ವಿವಿಎನ್‌ಎಲ್) ರವರಿಂದ ಸೌರ ವಿದ್ಯುತ್‌ನ್ನು ಶಾಖೋತ್ಪನ್ನ ವಿದ್ಯುತ್‌ನೊಂದಿಗೆ ಸೇರಿಸಿ, 70ಮೆ.ವ್ಯಾ ಸಂಯೋಜಿತ ವಿದ್ಯುತ್ತನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಮೇಲೆ ಓದಲಾದ (3)ರಲ್ಲಿ ನ್ಯಾಷನಲ್ ಸೋಲಾರ್ ಮಿಷನ್‌ನ ಫೇಸ್–2, ಬ್ಯಾಚ್–2, ಹಂತ–1 ರಂತೆ ದೇಶದಲ್ಲಿ ಸೌರ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಿ ರಾಜ್ಯಗಳಿಗೆ ವಿದ್ಯುತ್ ನೀಡುವ ಉದ್ದೇಶದಿಂದ ಈಗಾಗಲೇ ಮಾರ್ಗಸೂಚಿಗಳನ್ನು ರೂಪಿಸಿರುತ್ತಾರೆ ಹಾಗೂ ನಮ್ಮ ರಾಜ್ಯಕ್ಕೆ ಬೇಕಾಗಿರುವ ವಿದ್ಯುತ್ ಪ್ರಮಾಣವನ್ನು ತಿಳಸುವಂತೆ ಕೋರಿರುತ್ತಾರೆ. ಮೇಲೆ ಓದಲಾದ (5)ರಲ್ಲಿ ರಾಜ್ಯಕ್ಕೆ 1000 ಮೆ.ವ್ಯಾ ಸಾಮರ್ಥ್ಯಕ್ಕೆ ಫೇಸ್–2, ಬ್ಯಾಚ್–2, ಹಂತ–1 ರಲ್ಲಿ ವಿದ್ಯುತ್ ಅನ್ನು ಹಂಚಿಕೆ ಮಾಡಲು ಎಂಎನ್‌ಆರ್‌ಇ ಯನ್ನು ಕೋರಲಾಗಿತ್ತು.

ಮೇಲೆ ಓದಲಾದ (6)ರಲ್ಲಿ ರಾಜ್ಯಕ್ಕೆ ನ್ಯಾಷನಲ್ ಸೋಲಾರ್ ಮಿಷನ್ ರ ಫೇಸ್–2, ಬ್ಯಾಚ್–2, ಹಂತ–1ರಲ್ಲಿ ಸೌರ ವಿದ್ಯುತ್ ಯೋಜನೆಗಳಿಂದ 330 ಮೆ.ವ್ಯಾ ಹಾಗೂ ನಿಯೋಜಿಸದೆ ಇರುವ ಶಾಖೋತ್ಪನ್ನ ವಿದ್ಯುತ್‌ನಿಂದ 115 ಮೆ.ವ್ಯಾ ಅನ್ನು ಸಂಯೋಜಿಸಿ ರಾಜ್ಯಕ್ಕೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈ ವಿದ್ಯುತ್ ಸಾಮರ್ಥ್ಯವನ್ನು ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳಿಗೆ ಮರು ಹಂಚಿಕೆ ಮಾಡುವ ಅವಶ್ಯಕತೆ ಇರುವುದರಿಂದ ಹಾಗೂ ವಿದ್ಯುತ್ ವಿತರಣಾ ಕಂಪನಿಗಳು ಎನ್‌ವಿವಿಎನ್ ರವರೊಂದಿಗೆ ಮುಂದಿನ ಕ್ರಮವಹಿಸಲು ಅನುವು ಮಾಡಿಕೊಡಲು ಆದೇಶ ಹೊರಡಿಸಲು ಉದ್ದೇಶಿಸಿದೆ.

ಈ ಹಿನ್ನಲೆಯಲ್ಲಿ ಎನ್.ವಿ.ವಿ.ಎನ್ ನಿಂದ ಹಂಚಿಕೆಯಾಗಲು ಉದ್ದೇಶಿಸಿರುವ ಸಾಮರ್ಥ್ಯಕ್ಕೆ ಉತ್ಪಾದನೆಯಾಗುವ ಸಂಯೋಜಿತ ಸೌರ ವಿದ್ಯುತ್‌ನ್ನು ಎಲ್ಲಾ ವಿತರಣಾ ಕಂಪನಿಗಳಿಗೆ ಶೇಕಡಾವಾರು ಹಂಚಿಕೆಯನ್ನು ನೀಡಬೇಕಾಗಿರುತ್ತದೆ. ಮೇಲೆ ಓದಲಾದ (1) ರ ಆದೇಶದಂತೆ ಹಾಲಿ ಅಸಾಂಪ್ರದಾಯಕ ವಿದ್ಯುತ್‌ನ್ನು ಈಗಾಗಲೇ ಹಂಚಿಕೆ ಮಾಡಲಾಗಿರುತ್ತದೆ. ಮೇಲೆ ಓದಲಾದ (2) ರ ಆದೇಶದಲ್ಲಿ ರಾಜ್ಯದ ವಿವಿಧ ಮೂಲಗಳಿಂದ ದೊರಕುವ ವಿದ್ಯುತ್ ಶೇಕಡವಾರು ಪ್ರಮಾಣದಲ್ಲಿ ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆಯಾಗಿರುವ ಅನುಪಾತದಲ್ಲಿ, ಸಂಯೋಜಿತ ಸಾಮರ್ಥ್ಯದ ಸೌರ ವಿದ್ಯುತ್ತನ್ನು ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಲು ಉದ್ದೇಶಿಸಿ ಹಾಗೂ ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 70 ವಿಎಸ್‌ಸಿ 2013 ಬೆಂಗಳೂರು, ದಿನಾಂಕ: 17.03.2015

ನ್ಯಾಷನಲ್ ಸೋಲಾರ್ ಮಿಷನ್ ಫೇಸ್–2, ಬ್ಯಾಚ್–2, ಹಂತ–1 ಕಾರ್ಯಕ್ರಮದಲ್ಲಿ ಎನ್.ಟಿ.ಪಿ.ಸಿ – ವಿವಿಎನ್‌ಎಲ್ (ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮ ನಿಯಮಿತ – ವಿದ್ಯುತ್ ವ್ಯಾಪಾರ ನಿಗಮ)ದಿಂದ ರಾಜ್ಯಕ್ಕೆ ಸಂಭವನೀಯ ಹಂಚಿಕೆಯಾಗುವ ಸಂಯೋಜಿತ ಸೌರ ವಿದ್ಯುತ್ ಸಾಮರ್ಥ್ಯವನ್ನು ಈ ಕೆಳಕಂಡ ಅನುಪಾತದಂತೆ ರಾಜ್ಯ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ವಿತರಣಾ ಕಂಪನಿ	ಶೇಕಡವಾರು ವಿದ್ಯುತ್ ಹಂಚಿಕೆ ಪ್ರಮಾಣ	ಸೌರ ವಿದ್ಯುತ್ ಸಾಮರ್ಥ್ಯ MWp ನಲ್ಲಿ	ಶಾಖೋತ್ಪನ್ನ ವಿದ್ಯುತ್ ಸಾಮರ್ಥ್ಯ MW ನಲ್ಲಿ	ಒಟ್ಟು ಸಾಮರ್ಥ್ಯ MW ನಲ್ಲಿ
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	48.72	161	57	218
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	7.92	26	9	35
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	19.31	64	22	86

ಕಲ್ಬುರ್ಗಿ ವಿದ್ಯುತ್ ಸರಬರಾಜು ಕಂಪನಿ	13.40	44	15	59
ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ	10.65	35	12	47
ಒಟ್ಟು	**100.00**	**330**	**115**	**445**

ನಿಬಂಧನೆಗಳು:

1. ಈ ಆದೇಶವು ನ್ಯಾಷನಲ್ ಸೋಲಾರ್ ಮಿಷನ್ ರ ಫೇಸ್–2, ಬ್ಯಾಚ್–2, ಹಂತ–1ರಲ್ಲಿ ರಾಜ್ಯಕ್ಕೆ ಬರುವ ವಿದ್ಯುತ್ ದಿನಾಂಕದಿಂದ ಹಾಗೂ ಮುಂದಿನ ಆದೇಶದವರೆಗೂ ಜಾರಿಯಲ್ಲಿರುತ್ತದೆ.
2. ಈ ಶೇಕಡಾವಾರು ವಿದ್ಯುತ್ ಹಂಚಿಕೆ ಪ್ರಮಾಣವು ಕೇಂದ್ರ ಸರ್ಕಾರ/ಎನ್.ಟಿ.ಪಿ.ಸಿ – ವಿವಿಎನ್ಎಲ್ ನಿಂದ ಸಂಯೋಜಿತ ಸೌರ ವಿದ್ಯುತ್ (ಸೌರ ವಿದ್ಯುತ್‌ನ್ನು ಶಾಖೋತ್ಪನ್ನ ವಿದ್ಯುತ್‌ನೊಂದಿಗೆ ಸೇರಿಸಿ) ಯೋಜನೆಗಳಿಂದ ಬರುವ ವಿದ್ಯುತ್ ಪ್ರಮಾಣಕ್ಕೆ ಮಾತ್ರ ಅನ್ವಯಿಸುತ್ತದೆ.
3. ಈ ಶೇಕಡಾವಾರು ಹಂಚಿಕೆ ಪ್ರಮಾಣವನ್ನು ಅನುಸರಿಸಿ ಎನ್.ಟಿ.ಪಿ.ಸಿ – ವಿವಿಎನ್ಎಲ್ ನಿಂದ ಸಂಯೋಜಿತ ಸೌರ ವಿದ್ಯುತ್ ಯೋಜನೆಗಳಿಂದ ಬರುವ ವಿದ್ಯುತ್ ಪ್ರಮಾಣಕ್ಕೆ ಎನ್.ಟಿ.ಪಿ.ಸಿ – ವಿವಿಎನ್ಎಲ್ ರವರ ನಿಬಂಧನೆಗಳನ್ನು ಪಾಲಿಸುವುದು.
4. ಈ ಆದೇಶದಂತೆ ವಿತರಣಾ ಕಂಪನಿವಾರು ಹಂಚಿಕೆ ಮಾಡಲಾದ ವಿದ್ಯುತ್ ಪ್ರಮಾಣವನ್ನು ತಪ್ಪದೇ ಪಾಲಿಸುವುದು ಮತ್ತು ಈ ಹಂಚಿಕೆಯು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.
5. ಈ ಆದೇಶದ ನಿಬಂಧನೆಗಳನ್ನು ಮಾರ್ಪಡಿಸುವ ಅಧಿಕಾರ ಸರ್ಕಾರ ಹೊಂದಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಲ್.ರಾಮಚಂದ್ರ

ಸರ್ಕಾರದ ಉಪ ಕಾರ್ಯದರ್ಶಿ

PR. 224 ಇಂಧನ ಇಲಾಖೆ.

ಇಂಧನ ಸಚಿವಾಲಯ

ವಿಷಯ: ಸೌರನೀತಿ 2014–21ರಂತೆ ಭೂಮಾಲೀಕತ್ವವುಳ್ಳ ರೈತರ ಮೂಲಕ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯ ಯೋಜನೆಯಡಿಯಲ್ಲಿ 1 ರಿಂದ 3 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳ ಸಾಮರ್ಥ್ಯವನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚುವ ಬಗ್ಗೆ.

ಓದಲಾಗಿದೆ:
1. ಸೌರನೀತಿ 2014–21ರ ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 22.05.2014.
2. ಸರ್ಕಾರದ ಆದೇಶ ಸಂಖ್ಯೆ: ಇಎನ್ 62 ವಿಎಸ್‌ಸಿ 2014 ದಿನಾಂಕ: 26.08.2014.
3. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಇಡಿಎಲ್ ರವರ ಪತ್ರ ಸಂಖ್ಯೆ: ಕೆಆರ್‌ಇಡಿಎಲ್/07/ ಭೂಮಾಲೀಕತ್ವ ರೈತರು–149/2015/429 ದಿನಾಂಕ: 06/09.02.2015.
4. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಇಡಿಎಲ್ ರವರ ಪತ್ರ ಸಂಖ್ಯೆ: ಕೆಆರ್‌ಇಡಿಎಲ್/07/ ಭೂಮಾಲೀಕತ್ವ ರೈತರು/149/2015/616 ದಿನಾಂಕ: 28.02.2015.

ಪ್ರಸ್ತಾವನೆ:

ಸರ್ಕಾರವು ಸೌರ ನೀತಿ 2014–21ಅನ್ನು ಮೇಲೆ ಓದಲಾದ (1)ರ ಅಧಿಸೂಚನೆಯಂತೆ ಜಾರಿಗೊಳಿಸಿದೆ. ಈ ನೀತಿಯನ್ವಯ ಕಲಂ 8, ಪ್ರವರ್ಗ 1, ವರ್ಗ 1ರ ಅಡಿಯಲ್ಲಿ ರಾಜ್ಯದಲ್ಲಿ ಭೂ ಮಾಲೀಕತ್ವದ ರೈತರ ಭೂಮಿಯನ್ನು ಬಳಸಿ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯನ್ನು ಉತ್ತೇಜಿಸುವ ಸಲುವಾಗಿ ಯೋಜನೆಗಳನ್ನು ಹಂಚಿಕೆ ಮಾಡಲು ಸರ್ಕಾರದಿಂದ ಮಾರ್ಗಸೂಚಿಗಳನ್ನು ಮೇಲೆ ಓದಲಾದ (2)ರಲ್ಲಿ ಹೊರಡಿಸಲಾಗಿದೆ. ಸೌರ ನೀತಿ 2014–21ರನ್ವಯ ಈ ಯೋಜನೆಗೆ ಒಟ್ಟು 300 ಮೆ.ವ್ಯಾ ಸಾಮರ್ಥ್ಯವನ್ನು ನೀತಿಯ ಅವಧಿಗೆ ನಿಗದಿಪಡಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಮಾರ್ಗಸೂಚಿಗಳಡಿ ವಿದ್ಯುತ್ ವಿತರಣಾ ಕಂಪನಿವಾರು ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗವಾರು ಒಟ್ಟು 300 ಮೆ.ವ್ಯಾ ಸಾಮರ್ಥ್ಯದ ಗುರಿಯನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ನಿಗದಿಪಡಿಸಲಾಗಿರುತ್ತದೆ ಹಾಗೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವನ್ನು, ವಿದ್ಯುತ್ ವಿತರಣಾ ಕಂಪನಿಗಳ ಪರವಾಗಿ 1 ರಿಂದ 3 MWp ಸಾಮರ್ಥ್ಯದ ಸೋಲಾರ್ ಪವರ್ ಘಟಕಗಳನ್ನು ಸ್ಥಾಪಿಸಲು ಅರ್ಜಿಗಳನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕ ಆಹ್ವಾನಿಸಲು ಸೂಚಿಸಲಾಗಿತ್ತು.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಮೇಲೆ ಓದಲಾದ (3) ಮತ್ತು (4)ರ ಪತ್ರದಲ್ಲಿ ಕೆಆರ್‌ಇಡಿಎಲ್ ಸಂಸ್ಥೆಯು ಭೂಮಾಲಿಕತ್ವವುಳ್ಳ ರೈತರ ಮೂಲಕ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯ ಯೋಜನೆಯಡಿಯಲ್ಲಿ 1 ರಿಂದ 3 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಅರ್ಜಿಗಳನ್ನು ಸಲ್ಲಿಸಲು ಪ್ರಕಟಣೆಯನ್ನು ದಿನಾಂಕ:19.09.2014ರಂತೆ ನೀಡಲಾಗಿ ಒಟ್ಟು 295 ಅರ್ಜಿಗಳು ಸ್ವೀಕೃತಿಯಾಗಿರುತ್ತವೆ ಎಂದು ವರದಿ ಮಾಡಿರುತ್ತಾರೆ. ಈ ಅರ್ಜಿಗಳ ಪರಿಶೀಲನೆಯ ನಂತರ ಮೇಲೆ ಓದಲಾದ (2)ರ ಆದೇಶದಲ್ಲಿ ನಿಗದಿಪಡಿಸಿದ ಸಾಮರ್ಥ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ಅರ್ಹ ಅರ್ಜಿಗಳು ಸ್ವೀಕೃತಿಯಾಗದ ಕಾರಣ ಈ ಕೆಳಕಂಡ ವಿದ್ಯುತ್ ವಿತರಣಾ ಕಂಪನಿಗಳಲ್ಲಿ ಸಾಮರ್ಥ್ಯವು ಉಳಿಕೆಯಾಗಿರುತ್ತದೆಂದು ತಿಳಿಸಿರುತ್ತಾರೆ.

ಉಳಿಕೆ ಸಾಮರ್ಥ್ಯದ ವಿವರಗಳು:

(ಸಾಮರ್ಥ್ಯ ಮೆಗಾವ್ಯಾಟ್‌ಗಳಲ್ಲಿ)

ವಿದ್ಯುತ್ ವಿತರಣಾ ಕಂಪನಿ	**ಸಾಮಾನ್ಯ**	**ಪ.ಜಾ**	**ಪ.ಪಂ**	**ಒಟ್ಟು**
ಸೆಸ್ಕ್, ಮೈಸೂರು	2	1	2	5
ಮವಿಕಂ	7	2	2	11
ಹುವಿಕಂ	0	0	2	2
ಒಟ್ಟು	**9**	**3**	**6**	**18**

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಇಡಿಎಲ್ ರವರು ಮೇಲೆ ಓದಲಾದ (4)ರ ಪ್ರಸ್ತಾವನೆಯ ಪತ್ರದಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆವಿಕಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ(ಹುವಿಕಂ), ಕಲ್ಬುರ್ಗಿ ವಿದ್ಯುತ್ ಸರಬರಾಜು ಕಂಪನಿ(ಗುವಿಕಂ) ಗಳಲ್ಲಿ ಹಂಚಿಕೆ ಸಾಮರ್ಥ್ಯಕ್ಕಿಂತ ಹೆಚ್ಚಿನ ಅರ್ಹ ಅರ್ಜಿಗಳು ಸ್ವೀಕೃತಿಯಾಗಿರುತ್ತದೆ ಹಾಗೂ ಈ ಉಳಿಕೆ ಸಾಮರ್ಥ್ಯವನ್ನು ಈ ಕೆಳಕಂಡಂತೆ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆ ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

(ಸಾಮರ್ಥ್ಯ ಮೆಗಾವ್ಯಾಟ್‌ಗಳಲ್ಲಿ)

ವಿದ್ಯುತ್ ವಿತರಣಾ ಕಂಪನಿ	**ಸಂಸ್ಥೆಗಳು/ಟ್ರಸ್ಟ್‌ಗಳು**	**ಸಾಮಾನ್ಯ**	**ಪ.ಜಾ**	**ಪ.ಪಂ**
ಬೆವಿಕಂ	1	4	2	4
ಹುವಿಕಂ	0	3	1	–
ಗುವಿಕಂ	0	1	–	2

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 62 ವಿಎಸ್‌ಸಿ 2014 ಬೆಂಗಳೂರು, ದಿನಾಂಕ: 09.03.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಭೂಮಾಲೀಕತ್ವವುಳ್ಳ ರೈತರ ಮೂಲಕ ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯ ಯೋಜನೆಯಡಿಯಲ್ಲಿ 1 ರಿಂದ 3 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಉಳಿದಿರುವ 18 ಮೆ.ವ್ಯಾ. ಸಾಮರ್ಥ್ಯವನ್ನು ಈ ಕೆಳಕಂಡಂತೆ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆ ನೀಡಿದೆ.

(ಸಾಮರ್ಥ್ಯ ಮೆಗಾವ್ಯಾಟ್‌ಗಳಲ್ಲಿ)

ವಿದ್ಯುತ್ ವಿತರಣಾ ಕಂಪನಿ	**ಸಂಸ್ಥೆಗಳು/ಟ್ರಸ್ಟ್‌ಗಳು**	**ಸಾಮಾನ್ಯ**	**ಪ.ಜಾ**	**ಪ.ಪಂ**	**ಒಟ್ಟು**
ಬೆವಿಕಂ	1	4	2	4	11
ಹುವಿಕಂ	0	3	1	–	4
ಗುವಿಕಂ	0	1	–	2	3
ಒಟ್ಟು	1	8	3	6	18

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿನ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಲ್.ರಾಮಚಂದ್ರ

ಸರ್ಕಾರದ ಉಪ ಕಾರ್ಯದರ್ಶಿ

ಇಂಧನ ಇಲಾಖೆ.

PR. 225

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ:– ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ.

ಓದಲಾಗಿದೆ:–

1. ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ ರವರ ಏಕ ಕಡತ ಸಂಖ್ಯೆ:ಮಿಮ್ಸ್/ಕಟ್ಟಡ/02ಬಿ/ 2013–14, ದಿನಾಂಕ:28–7–2014ರ ಪ್ರಸ್ತಾವನೆ..
2. ನಿಯಂತ್ರಣಾಧಿಕಾರಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಾಣಾಧಿಕಾರಿ, ಮಂಡ್ಯ ರವರ ಪತ್ರ ಸಂಖ್ಯೆ:2/13–14, ದಿನಾಂಕ:29–8–2013.
3. ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರವರ ಪತ್ರ ಸಂಖ್ಯೆ ಮಿಮ್ಸ್/ಕಟ್ಟಡ/02/2013–14, ದಿನಾಂಕ:5–9–2013.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ರವರ ಏಕ ಕಡತ ಸಂಖ್ಯೆ:ಮಿಮ್ಸ್/ಕಟ್ಟಡ/02ಬಿ/2013–14, ದಿನಾಂಕ:8–9–2014 ರಲ್ಲಿನ ಟಿಪ್ಪಣಿ..
5. ನಿರ್ದೇಶಕರು, ಮಿಮ್ಸ್ ರವರ ಏಕ ಕಡತ ಸಂಖ್ಯೆ:ಮಿಮ್ಸ್/ ಕಟ್ಟಡ/02ಬಿ/2013–14,ದಿನಾಂಕ:15–10–2014 ರಲ್ಲಿನ ಟಿಪ್ಪಣಿ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರವರು ಮಂಡ್ಯ ಜಿಲ್ಲಾ ಆಸ್ಪತ್ರೆಯು ಮೆಡಿಕಲ್ ಕಾಲೇಜು ಪ್ರಾರಂಭವಾದ ನಂತರ ಬೋದಕ ಆಸ್ಪತ್ರೆಯಾಗಿ ಮಾರ್ಪಟ್ಟು ಸಂಸ್ಥೆಗೆ ಸೇರ್ಪಡೆಯಾಗಿದೆ. ಈ ಕಾಲೇಜಿನಲ್ಲಿ 100 ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದ್ದು ಸೀಟುಗಳ ಸಂಖ್ಯೆಯನ್ನು 100 ರಿಂದ 150 ಕ್ಕೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಈಗಾಗಲೇ 6 ಪಿ.ಜಿ. ಕೋರ್ಸ್‌ಗಳು ಇದ್ದು ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಪಿ.ಜಿ.ಕೋರ್ಸ್‌ಗಳು ಲಭಿಸಲಿವೆ. ಜಿಲ್ಲಾ ಆಸ್ಪತ್ರೆಯು ಭೋದಕ ಆಸ್ಪತ್ರೆಯಾಗಿ ಮಾರ್ಪಟ್ಟ ನಂತರ ಒಳರೋಗಿ ಮತ್ತು ಹೊರ ರೋಗಿಗಳ ಸಂಖ್ಯೆಯಲ್ಲಿ 5 ಪಟ್ಟು ಹೆಚ್ಚಳವಾಗಿರುತ್ತದೆ. ಹಾಲಿ ಇರುವ ರಕ್ತನಿಧಿ ಕೇಂದ್ರದಲ್ಲಿ ಹಾಗೂ ಪ್ರಯೋಗಾಲಯಗಳಲ್ಲಿ ಹೆಚ್ಚುವರಿಯಾಗಿ ಉಪಕರಣಗಳನ್ನು ಅಳವಡಿಸಬೇಕಿದ್ದು ಎಂ.ಸಿ.ಐ. ನವದೆಹಲಿ ರವರು ನಿಗಧಿಪಡಿಸಿರುವ ಸ್ಥಳಾವಕಾಶಕ್ಕಿಂತ ಕಡಿಮೆ ಇರುತ್ತದೆ. ಆದುದರಿಂದ ಮಿಮ್ಸ್ ಆವರಣದಲ್ಲಿ ಇರುವ ಕಿರಿಯ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರದಲ್ಲಿ ವ್ಯಾಸಂಗ ಮಾಡುತ್ತಿರುವ ಕಿರಿಯ ಆರೋಗ್ಯ ಸಹಾಯಕಿಯರ ತರಬೇತಿ ಅವಧಿಯು ಸೆಪ್ಟೆಂಬರ್ ನಲ್ಲಿ ಪೂರ್ಣಗೊಳ್ಳಲಿದೆ. ಕಿರಿಯ ಆರೋಗ್ಯ ಸಹಾಯಕಿಯರ ತರಬೇತಿಗಾಗಿ ಹಿಂದಿನ ವರ್ಷದಿಂದ ಯಾವುದೇ ಪ್ರವೇಶ ಪ್ರಕ್ರಿಯೆ ಮಾಡಲಾಗಿರುವುದಿಲ್ಲ. ಮತ್ತು ಸಂಸ್ಥೆಯ ವತಿಯಿಂದ ಒಂದು ನರ್ಸಿಂಗ್ ಕಾಲೇಜನ್ನು ಸ್ಥಾಪನೆ ಮಾಡಬೇಕಾಗಿದ್ದು ನರ್ಸಿಂಗ್ ಕಾಲೇಜು ಕಟ್ಟಡಕ್ಕೆ ಮಿಮ್ಸ್ ಆವರಣದಲ್ಲಿ ಈಗಾಗಲೇ ಸ್ಥಳವನ್ನು ಗುರುತಿಸಲಾಗಿದೆ. ಹಾಲಿ ಇರುವ ಎ.ಎನ್.ಎಂ. ತರಬೇತಿ ಕಟ್ಟಡವು ನರ್ಸಿಂಗ್ ಕಾಲೇಜು ಸ್ಥಾಪನೆಗೆ ಬೇಕಾಗುವಷ್ಟು ಸ್ಥಳಾವಕಾಶ ಹೊಂದಿರುವುದಿಲ್ಲ. ನರ್ಸಿಂಗ್ ಕಾಲೇಜು ಕಟ್ಟಡವನ್ನು ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವುದರಿಂದ ಹಾಲಿ ಇರುವ ಕಟ್ಟಡದ ಅವಶ್ಯಕತೆ ಇನ್ನು ಮುಂದೆ ಉದ್ಭವಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಕಟ್ಟಡವನ್ನು ಮಿಮ್ಸ್ ಸಂಸ್ಥೆಗೆ ಹಸ್ತಾಂತರಿಸಿದಲ್ಲಿ ಎಲ್ಲಾ ತಪಾಸಣೆಗಳನ್ನು ಒಂದೇ ಕಟ್ಟಡದಲ್ಲಿ ನಿರ್ಮಿಸಲು ಮತ್ತು ಎಂ.ಸಿ.ಐ. ನಿಯಮಾನುಸಾರ ಅನುಮತಿ ಪಡೆದುಕೊಳ್ಳಲು ಅನುಕೂಲವಾಗುತ್ತದೆ. ಎಂದು ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರು ಪ್ರಸ್ತಾಪಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರದಲ್ಲಿ ನಿಯಂತ್ರಣಾಧಿಕಾರಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ರವರು ಮಂಡ್ಯ ಜಿಲ್ಲೆಯಲ್ಲಿನ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರದ ಕಟ್ಟಡವು ಜಿಲ್ಲಾ ಆಸ್ಪತ್ರೆ, ಮಂಡ್ಯದ ಆವರಣದಲ್ಲಿ ಇರುತ್ತದೆ. ಈ ಕಟ್ಟಡವನ್ನು 1995 ರಲ್ಲಿ ಐಪಿಪಿ–9 ಅಡಿಯಲ್ಲಿ ಕಟ್ಟಡ ನಿರ್ಮಾಣಗೊಳಿಸಿ ಈ ಸಂಸ್ಥೆಯಿಂದ ನಡೆಸಲಾಗುತ್ತಿದೆ. ಈ ಸಂಸ್ಥೆಯ ಭೂಮಿಯು ಸರ್ಕಾರದ ಭೂಮಿಯಾಗಿದ್ದು ಈ ಜಾಗವನ್ನು ಪ್ರತ್ಯೇಕವಾಗಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಕ್ಕಾಗಿ ನಿರ್ಮಿಸಲಾಗಿರುವ ಕಟ್ಟಡವನ್ನು ಇಲ್ಲಿಯವರೆಗೂ ಉಪಯೋಗಿಸಲಾಗುತ್ತಿದೆ. ಇಲ್ಲಿ ವರ್ಷಕ್ಕೆ 30 ವಿದ್ಯಾರ್ಥಿನಿಯರನ್ನು ಒಳಗೊಂಡಂತೆ ಒಟ್ಟು 2 ತಂಡದಲ್ಲಿ 60 ಜನ ವಿದ್ಯಾರ್ಥಿನಿಯರು ತರಬೇತಿ ಪಡೆಯುತ್ತಿರುತ್ತಾರೆ. ಹಾಗೂ ಈ ವಿದ್ಯಾರ್ಥಿನಿಯರು ಎರಡು ವರ್ಷಗಳ ಶೈಕ್ಷಣಿಕ ಅವಧಿಗೆ ಇಲ್ಲಿಯೇ ವಾಸ್ತವ್ಯ ಹೂಡಬೇಕಾಗಿರುತ್ತದೆ. ಹೀಗಿರುವಾಗ ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ ರವರು ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ ಪ್ರಾರಂಭವಾದ ದಿನಾಂಕದಿಂದ ಜಿಲ್ಲಾ ಆಸ್ಪತ್ರೆಯು ಸ್ವಾಯತ್ತ ಸಂಸ್ಥೆಯ ಸ್ವಾದೀನಕ್ಕೆ ಒಳಪಟ್ಟಿರುವುದರಿಂದ ಕೂಡಲೇ ತರಬೇತಿ ಕೇಂದ್ರವನ್ನು ತೆರವುಗೊಳಿಸಲು ಸೂಚಿಸಿರುತ್ತಾರೆ. ಆದರೆ ಈ ತರಬೇತಿ ಕೇಂದ್ರವನ್ನು 2010 ರಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಅಧೀನಕ್ಕೆ ಹಸ್ತಾಂತರಿಸಿರುತ್ತಾರೆ. ಮುಂದುವರೆದು ಮಂಡ್ಯ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿಗಾಗಿ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಕ್ಲಿನಿಕಲ್ ಆಸ್ಪತ್ರೆ ಅನುಭವಕ್ಕೆ ಜಿಲ್ಲಾ ಆಸ್ಪತ್ರೆಗೆ ವಿದ್ಯಾರ್ಥಿನಿಯರನ್ನು ನಿಯೋಜಿಸಲಾಗುತ್ತಿದೆ. ಹೀಗಿರುವಾಗ ಸದರಿ ತರಬೇತಿ ಸಂಸ್ಥೆಯನ್ನು ಬೇರೆ ಕಡೆ ಪ್ರಾರಂಭಿಸಿದಲ್ಲಿ ಎಲ್ಲಾ ವಿದ್ಯಾರ್ಥಿನಿಯರಿಗೆ ಅನಾನುಕೂಲವಾಗುತ್ತದೆ ಎಂದು ತಿಳಿಸುತ್ತಾ ಈ ವಿಷಯದಲ್ಲಿ ಮುಂದಿನ ಮಾರ್ಗದರ್ಶನ ಮತ್ತು ಸೂಕ್ತ ಆದೇಶವನ್ನು ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (3) ರಲ್ಲಿ ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರವರು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕಟ್ಟಡವನ್ನು ತೆರವುಗೊಳಿಸುವ ಕುರಿತಂತೆ ಸಂಸ್ಥೆಯ ಆವರಣದ ಹೊರಬಾಗದಲ್ಲಿ ಈ ಸಂಸ್ಥೆಗೆ ಸೇರಿದ ಒಂದು ಕಟ್ಟಡವಿದ್ದು ಸದರಿ ಕಟ್ಟಡಕ್ಕೆ ತರಬೇತಿ ಕೇಂದ್ರವನ್ನು ಸ್ಥಳಾಂತರ ಮಾಡಬಹುದಾಗಿರುತ್ತದೆ. ಈ ಕಟ್ಟಡದಲ್ಲಿಯೂ ಸಹ ಎಲ್ಲಾ ಅನುಕೂಲಗಳು ಇದ್ದು ತರಬೇತಿ ಕೇಂದ್ರಕ್ಕೆ ಬೇರೆ ವ್ಯವಸ್ಥೆ ಕಲ್ಪಿಸುವ ತನಕ ಸಂಸ್ಥೆಯ ಆವರಣದ ಹೊರಭಾಗದಲ್ಲಿರುವ ಕಟ್ಟಡವನ್ನು ಉಪಯೋಗಿಸಕೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (4)ರ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ರವರು ಪ್ರಸ್ತುತ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಕಟ್ಟಡವು ಮಂಡ್ಯ ವೈದ್ಯಕೀಯ ಸಂಸ್ಥೆಯ ಕಟ್ಟಡಕ್ಕೆ ಹೊಂದಿಕೊಂಡಿದ್ದು ಇದನ್ನು ತೆರವುಗೊಳಿಸಿಕೊಟ್ಟಲ್ಲಿ ರಕ್ತ ತಪಾಸಣಾ ಕೇಂದ್ರ ಸ್ಥಾಪಿಸಲು ಅನುಕೂಲವಾಗುತ್ತದೆ ಎಂದು ನಿರ್ದೇಶಕರು, ಮಿಮ್ಸ್ ಕೋರಿರುತ್ತಾರೆ. ಅದಕ್ಕೆ ಈಗ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಕಟ್ಟಡದ ಬದಲಾಗಿ ಶಾಲೆಗೆ ಬೇಕಾಗುವ ಕಟ್ಟಡ ನೀಡಲು ಕೋರಲಾಯಿತು. ಅದಕ್ಕೆ ನಿರ್ದೇಶಕರು, ಮಿಮ್ಸ್ ರವರ ಅಭಿಪ್ರಾಯದಂತೆ ಮಂಡ್ಯ ಜಿಲ್ಲಾ ಹಾಲಿ ಜಿಲ್ಲಾ ಶಸ್ತ್ರಚಿಕಿತ್ಸಕರ ವಾಸ ಸ್ಥಾನದ ಕಟ್ಟಡ ಹಳೆಯದಾಗಿರುವುದರಿಂದ ಅದನ್ನು ನೆಲಸಮಗೊಳಿಸಿ ಹೊಸದಾಗಿ ಆ ಜಾಗದಲ್ಲಿ ಅಥವಾ ನರ್ಸಿಂಗ್ ಕಾಲೇಜ್ ಸ್ಥಾಪಿಸಲು ಉದ್ದೇಶಿಸಿರುವ ಜಾಗದಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಶಾಲೆಯ ಕಟ್ಟಡವನ್ನು ಕಟ್ಟಿಸಿಕೊಟ್ಟ ನಂತರ ಈಗಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಶಾಲೆಯನ್ನು ಹಸ್ತಾಂತರಿಸಿಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (5)ರ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಮಿಮ್ಸ್ ಸಂಸ್ಥೆಯ ಬಹುತೇಕ ವಿಭಾಗಗಳಿಗೆ ಎಂ.ಸಿ.ಐ. ನವರು ತಪಾಸಣೆ ನಡೆಸಿದ್ದು, ರಕ್ತ ತಪಾಸಣೆ ಕೇಂದ್ರ ಹಾಗೂ Central Research Lab ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಆದುದರಿಂದ, ಹಾಲಿ ಇರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಶಾಲೆಯ ಕಟ್ಟಡವನ್ನು ಅತ್ಯಂತ ಜರೂರಾಗಿ ಹಸ್ತಾಂತರಗೊಳಿಸಬೇಕೆಂದು ಕೋರುತ್ತಾ ಹಾಲಿ ಇರುವ ಶಾಲೆಯಲ್ಲಿ ಈಗ ಯಾವುದೇ ವಿದ್ಯಾರ್ಥಿನಿಯರು ಇರುವುದಿಲ್ಲ ಕಟ್ಟಡ ಖಾಲಿ ಇರುತ್ತದೆ. ಮುಂದುವರೆದು ಹಾಲಿ ಇರುವ ಜಿಲ್ಲಾ ಶಸ್ತ್ರಚಿಕಿತ್ಸಕರ ವಾಸ ಸ್ಥಾನದ ಕಟ್ಟಡ ಬಹಳ ಹಳೆಯದಾಗಿದ್ದು ಅದನ್ನು ನೆಲಸಮಗೊಳಿಸಿ ಅಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಶಾಲೆಯನ್ನು ನಿರ್ಮಿಸಬಹುದಾಗಿರುತ್ತದೆ ಆ ನಿವೇಶನದ ಅಳತೆ 95 x100 ಅಡಿ ಇರುತ್ತದೆ ಎಂದು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸುಸೂತ್ರ ನಿರ್ವಹಣೆಯ ದೃಷ್ಟಿಯನ್ನು ಮನಗಂಡು ಈ ಕೆಳಕಂಡಂತೆ ಆದೇಶಿಸಲಾಗಿರುತ್ತದೆ..

ಸರ್ಕಾರದ ಆದೇಶ ಸಂಖ್ಯೆ: ಆಕುಕ 161 ಎಫ್‌ಪಿಆರ್ 2014, ಬೆಂಗಳೂರು, ದಿನಾಂಕ:26–2–2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರ ಕಟ್ಟಡವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಂಡ್ಯ ವೈದ್ಯಕಿಯ ವಿಜ್ಞಾನಗಳ ಸಂಸ್ಥೆಯ ಆಡಳಿತಾತ್ಮಕ ವ್ಯಾಪ್ತಿಗೆ ಹಸ್ತಾಂತರಿಸಲಾಗಿದೆ. ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಹಾಲಿ ಇರುವ ಜಿಲ್ಲಾ ಶಸ್ತ್ರ ಚಿಕಿತ್ಸಕರ ವಾಸ ಸ್ಥಾನವು ಹಳೆಯ/ಶಿಥಿಲಾವಸ್ಥೆಯಲ್ಲಿದ್ದು ಅದನ್ನು ನೆಲಸಮಗೊಳಿಸಿ 95 x 100 ಅಡಿ ಅಳತೆಯ ಸದರಿ ನಿವೇಶನದಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಶಾಲೆಯ ಕಟ್ಟಡವನ್ನು ನಿರ್ಮಾಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳವುದು.

ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದ ಹೊರಭಾಗದಲ್ಲಿ ಇರುವ ಮಿಮ್ಸ್ ಸಂಸ್ಥೆಗೆ ಸೇರಿದ ಕಟ್ಟಡಕ್ಕೆ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರವನ್ನು ಸ್ಥಳಾಂತರ ಮಾಡುವಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚಂದ್ರಹಾಸ ಗಂ.ತಾಳೂಕರ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

PR. 242

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ:– ಶ್ರೀ ಬಿ.ಎಲ್.ಬಾಲ್ಯಾನಾಯಕ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ ಇವರ ಮೇಲಿನ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:– 1) ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಬಿಡಿ–38/ಮೊ.ನಂ 2/2014 ರಾಮನಗರ, ದಿನಾಂಕ: 10.12.2014.

2) ಅಂತಿಮ ತನಿಖಾ ವರದಿ, ಕರ್ನಾಟಕ ಲೋಕಾಯುಕ್ತ, ರಾಮನಗರ ಜಿಲ್ಲಾ ಪೋಲೀಸ್ ಠಾಣಾ ಮೊ.ಸಂ 02/2014 ಕಲಂ 7,13(1)(ಡಿ) ಜೊತೆಗೆ 13(2) ಪಿ. ಸಿ ಕಾಯ್ದೆ 1988, ದಿನಾಂಕ: 24.06.2014.

ಪ್ರಸ್ತಾವನೆ:

ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ಪತ್ರದಲ್ಲಿ ಆಪಾದಿತರಾದ ಶ್ರೀ ಬಿ.ಎಲ್.ಬಾಲ್ಯಾನಾಯಕ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ ಇವರು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರ ಕಲಂ 7, 13(1)(ಡಿ) ಸಹವಾಚನ 13(2) ಲಂಚ ನಿರೋಧ ಕಾಯ್ದೆಯಡಿಯಲ್ಲಿ ಎಸಗಿದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿದ್ದು, ಸದರಿ ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಲು ಅರ್ಹರಾಗಿದ್ದು, ಅದರಂತೆ ಸದರಿಯವರನ್ನು ಅಭಿಯೋಜನೆಗೊಳಪಡಿಸಲು ಸಕ್ಷಮ ಪ್ರಾಧಿಕಾರಿ, ಅರ್ಥಾತ್ ಆರೋಪಿತರನ್ನು ತನ್ನ ಹುದ್ದೆಯಿಂದ ತೆಗೆದು ಹಾಕುವ/ವಜಾಮಾಡುವ ಅಧಿಕಾರವುಳ್ಳ ಪ್ರಾಧಿಕಾರವಾದ ಸರ್ಕಾರದಿಂದ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ರ ಕಲಂ 19 (1) (ಬಿ)ರನ್ವಯ ಅಭಿಯೋಜನಾ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರ ಜಿಲ್ಲೆ, ರಾಮನಗರ, ಇವರ ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಅಂತಿಮ ತನಿಖಾ ವರದಿಯಲ್ಲಿ ತಿಳಿಸಿರುವಂತೆ ಈ ಪ್ರಕರಣದಲ್ಲಿ ಪಿರ್ಯಾದುದಾರರಾದ ಶ್ರೀ ಮೋಹನ್ ನಾರಾಯಣ್ ಬಿನ್ ಲೇಟ್ ಟಿ.ಬಿ.ಮೆನನ್ ಕೆ.ಆರ್ ಪುರಂ ಬೆಂಗಳೂರು ಇವರು ಎಲ್ಲಿಕಾನ್ ಅಸೋಸಿಯೇಟ್ಸ್, ದೊಮ್ಮಲೂರು, ಬೆಂಗಳೂರು ಕಂಪನಿಗೆ ಸಂಬಂಧಿಸಿದ ವುಡ್‌ವರ್ಕ್ಸ್ ಫ್ಯಾಕ್ಟರಿ ಘಟಕವನ್ನು ಬೆಂಗಳೂರಿನ ವರ್ತೂರಿನ ಕಾವೇರಪ್ಪ ಲೇಔಟ್‌ನಿಂದ ರಾಮನಗರ ಜಿಲ್ಲೆ ಹಾರೋಹಳ್ಳಿ ಟೌನ್, 1ನೇ ಫೇಸ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ಪ್ಲಾಟ್ ನಂ 129/ಬಿ ಇಲ್ಲಿಗೆ ಸ್ಥಳಾಂತರಿಸಬೇಕಾಗಿದ್ದು, ಈ ಸಂಬಂಧ ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ ಇವರಿಂದ ಎಕ್ಸಮ್‌ಷನ್ ಸರ್ಟಿಫಿಕೆಟ್ ಬೇಕಾಗಿದ್ದು, ಅದನ್ನು ಪಡೆಯಲು ಮೇಲೆ ತಿಳಿಸಿರುವ ಪಿರ್ಯಾದುದಾರ ದಿನಾಂಕ: 19.06.2014 ರಂದು ಅರ್ಜಿ ಸಲ್ಲಿಸಿದ್ದು, ಸರ್ಟಿಫಿಕೆಟ್ ನೀಡುವ ಸಲುವಾಗಿ ಶ್ರೀ ಬಾಲ್ಯಾನಾಯಕ್ ಬಿ.ಎಲ್ ಜಂಟಿ ನಿರ್ದೇಶಕರು ಇವರು ರೂ.10,000/– ಲಂಚದ ಹಣಕ್ಕೆ ಬೇಡಿಕೆ ಇಟ್ಟಾಗ ಪಿರ್ಯಾದುದಾರರು ಲಂಚ ಕೊಡಲು ಇಷ್ಟವಿಲ್ಲದ್ದರಿಂದ ರಾಮನಗರ ಲೋಕಾಯುಕ್ತ ಠಾಣೆಗೆ ಬಂದು ವಿಷಯ ತಿಳಿಸಿ ವಾಯ್ಸ್ ರೆಕಾರ್ಡರ್ ತೆಗೆದುಕೊಂಡು ಹೋಗಿ ಮತ್ತೊಮ್ಮೆ ಆರೋಪಿತರನ್ನು ವಿಚಾರಿಸಿದಾಗ ಸದರಿ ಆರೋಪಿತರು ರೂ 6,000/– ಲಂಚಕ್ಕೆ ಒತ್ತಾಯಿಸಿದ್ದು, ಲಂಚ ಕೊಡಲು ಇಷ್ಟವಿಲ್ಲದ್ದರಿಂದ ದಿನಾಂಕ: 24.06.2014 ರಂದು ರಾಮನಗರ ಲೋಕಾಯುಕ್ತ ಠಾಣೆಗೆ ಹಾಜರಾಗಿ ಸದರಿ ಆರೋಪಿತರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೋರಿ ದೂರು ಸಲ್ಲಿಸಿರುತ್ತಾರೆ. ಆ ದೂರನ್ನು ಆಧರಿಸಿ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರ ಇವರು ಮೇಲ್ಕಂಡ ಆರೋಪಿತರ ವಿರುದ್ಧ ರಾಮನಗರ ಲೋಕಾಯುಕ್ತ ಠಾಣೆ ಮೊ.ನಂ 2/2014 ಕಲಂ 7, 13(2) ಪಿ.ಸಿ ಆಕ್ಟ್ 1988ರಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಂಡಿರುತ್ತಾರೆ.

ತದನಂತರ ಪಂಚ ಸಾಕ್ಷಿಗಳೊಂದಿಗೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿಯವರು ದಿನಾಂಕ: 24.06.2014 ರಂದು ಬೀಸಿದ ಬಲೆ ಯಶಸ್ವಿಯಾಗಿದ್ದು, ಆರೋಪಿತರಾದ ಶ್ರೀ ಬಾಲ್ಯಾನಾಯಕ ಬಿ.ಎಲ್, ಜಂಟಿ ನಿರ್ದೇಶಕರು, ಇವರು ತಮ್ಮ ಕಛೇರಿಯಲ್ಲಿ ನೆರಳು ಸಾಕ್ಷಿದಾರರ ಸಮಕ್ಷಮ ಫಿರ್ಯಾದಿಯಿಂದ ಲಂಚದ ಹಣ ರೂ 6,000/–ಕ್ಕೆ ಒತ್ತಾಯಿಸಿ ಅದನ್ನು ಸದರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆರ್.ಎಸ್.ಪಾಟೀಲ್ ಅಧೀಕ್ಷಕರು ಇವರ ಬಳಿ ಕೊಡುವಂತೆ ತಿಳಿಸಿದ್ದು, ಅದರಂತೆ ಲಂಚದ ಹಣವನ್ನು ಫಿರ್ಯಾದುದಾರರು ನೀಡಿದ್ದು, ಆರೋಪಿತ ಶ್ರೀ ಬಾಲ್ಯಾನಾಯಕ ಬಿ.ಎಲ್ ಜಂಟಿ ನಿರ್ದೇಶಕರು ಮತ್ತು ಲಂಚದ ಹಣ ಸ್ವೀಕರಿಸಿದ ಆರ್.ಎಸ್.ಪಾಟೀಲ್ ಅಧೀಕ್ಷಕರು ಜಿಲ್ಲಾ ಕೈಗಾರಿಕಾ ಕೇಂದ್ರ,

ರಾಮನಗರ ಇವರುಗಳು ರಾಮನಗರ ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿರುತ್ತಾರೆ. ಲಂಚದ ಹಣ ಪಡೆದಿರುವುದು ದೃಢಪಟ್ಟಿರುವುದರಿಂದ ಸದರಿ ಇಬ್ಬರು ಆರೋಪಿತರುಗಳನ್ನು ಬಂಧಿಸಿ, ಘನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ತಿಳಿಸಿರುತ್ತಾರೆ.

ಆರೋಪಿತ ಅಧಿಕಾರಿಯಾದ ಶ್ರೀ ಬಿ. ಎಲ್. ಬಾಲ್ಯನಾಯಕ್, ಪ್ರೊಬೇಷನರಿ ಸಹಾಯಕ ನಿರ್ದೇಶಕರು, ಪ್ರಸ್ತುತ ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ ಜಂಟಿ ನಿರ್ದೇಶರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ ಜಿಲ್ಲೆ, ರಾಮನಗರ ಇವರುಗಳು ಕಲಂ 7, 13 (1) (ಡಿ) ಜೊತೆಗೆ 13 (2) ಪಿ.ಸಿ. ಆಕ್ಟ್ 1988 ಪ್ರಕಾರ ಶಿಕಾರ್ಹ ಅಪರಾಧವೆಸಗಿರುವುದು ದೃಢಪಟ್ಟಿರುವುದರಿಂದ ಸದರಿ ಆರೋಪಿತ ಅಧಿಕಾರಿ ವಿರುದ್ಧ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ಅಗತ್ಯವಾದ ಅಭಿಯೋಜನಾ ಮಂಜೂರಾತಿ ಆದೇಶವನ್ನು ಸಕ್ಷಮ ಪ್ರಾಧಿಕಾರವಾದ ಸರ್ಕಾರದಿಂದ ಭ್ರಷ್ಟಾಚಾರ ನಿಯಂತ್ರಣ ಕಾಯಿದೆಯ ಕಲಂ19ರ ರೀತ್ಯಾ ಒದಗಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯೊಂದಿಗೆ ಪ್ರಕರಣದ ತನಿಖಾ ವರದಿಯ ನೆರಳಚ್ಚು, ಪ್ರಥಮ ವರ್ತಮಾನ ವರದಿ, ಶೋಧನಾ ಮಹಜರು, ವಶಪಡಿಸಿಕೊಂಡ ದಾಖಲೆಗಳು ಹಾಗೂ ಸಾಕ್ಷಿದಾರರುಗಳ ಹೇಳಿಕೆಗಳ ವಿವರಗಳನ್ನು ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಅಂತಿಮ ತನಿಖಾ ವರದಿಯೊಂದಿಗೆ ಒದಗಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿದೆ, ಆಪಾದಿತರಾದ ಶ್ರೀ ಬಿ.ಎಲ್.ಬಾಲ್ಯಾನಾಯಕ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ ಜಿಲ್ಲೆ ಇವರ ಮೇಲಿನ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ಇವರನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ರ ಕಲಂ 7, 13(1)(ಡಿ) ಸಹವಾಚನ 13(2) ರಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಭ್ರಷ್ಟಾಚಾರ ನಿರ್ಮೂಲನ ಕಾಯ್ದೆ 1988 ರ ಕಲಂ 19(1)(ಬಿ) ರನ್ವಯ ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಹೊಂದಿರುತ್ತದೆ. ಅದರಂತೆ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 228 ಕೈಸೇವಿ 2014, ಬೆಂಗಳೂರು, ದಿನಾಂಕ: 03 ನೇ ಮಾರ್ಚ್ 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಪಾದಿತ ಸರ್ಕಾರಿ ಅಧಿಕಾರಿಯಾದ ಶ್ರೀ ಬಿ.ಎಲ್.ಬಾಲ್ಯಾನಾಯಕ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಮನಗರ ಜಿಲ್ಲೆ ಇವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ರ ಕಲಂ 7, 13(1)(ಡಿ) ಸಹವಾಚನ 13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಮನವರಿಕೆಯಾಗಿರುವುದರಿಂದ ಇವರನ್ನು ಹುದ್ದೆಯಿಂದ ತೆಗೆದುಹಾಕುವ/ವಜಾ ಮಾಡುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಭ್ರಷ್ಟಾಚಾರ ನಿರ್ಮೂಲನ ಕಾಯ್ದೆ 1988 ರ ಕಲಂ 19(1)(ಬಿ) ರಡಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅಭಿಯೋಜನಾ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಕರ್ನಾಟಕ ಸರ್ಕಾರದ ವ್ಯವಹಾರ ನಿಯಮಾವಳಿ 1977 ರನ್ವಯ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ:03.03.2015 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು ಮತ್ತು ಸಮನ್ವಯ)

PR. 199
SC. 100

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ:– ಆರೋಪಿತರಾದ ಕೆ.ಪಿ. ಪರಮೇಶ್ವರಪ್ಪ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ವಿರುದ್ಧ ದಾಖಲಾದ ಲೋಕಾಯುಕ್ತ ದಾಳಿ ಪ್ರಕರಣದ ಮೇಲೆ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು.

ಓದಲಾಗಿದೆ:– ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಪತ್ರದ ಸಂಖ್ಯೆ: ಲೋಕ್/ ಐಎನ್‌ವಿ (ಜಿ)/ಸಿಟಿಎಲ್– /ಸಿಆರ್ 13/2014, ದಾವಣಗೆರೆ, ದಿನಾಂಕ: 20.12.2014.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಆರೋಪಿತರಾದ ಕೆ.ಪಿ. ಪರಮೇಶ್ವರಪ್ಪ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ವಿರುದ್ಧ ದಾಖಲಾದ ಲೋಕಾಯುಕ್ತ ದಾಳಿ ಪ್ರಕರಣದ ಮೇಲೆ ಇವರನ್ನು ಅಮಾನತ್ತುಗೊಳಿಸುವಂತೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವರದಿಯಂತೆ ಸದರಿ ಅಧಿಕಾರಿಯು ಮೂಲ ಆದಾಯಕ್ಕಿಂತ ಹೆಚ್ಚಿನ ಅಕ್ರಮ ಸಂಪತ್ತು ಹೊಂದಿರುತ್ತಾರೆ ಎಂಬ ನಂಬಲರ್ಹವಾದ ಮಾಹಿತಿಯ ಆಧಾರದ ಮೇಲೆ ಇವರ ವಿರುದ್ಧ ಲೋಕಾಯುಕ್ತ ಪೋಲೀಸ್ ಠಾಣೆ, ದಾವಣಗೆರೆ ಇಲ್ಲಿ ಮೊಕದ್ದಮೆ ಸಂಖ್ಯೆ: 13/2014 ಅನ್ನು ಭ್ರಷ್ಟಾಚಾರ ನಿರೋಧ ಕಾಯ್ದೆ 1988 ರ ಕಲಂ 13 (1) (ಇ) ಸಹವಾಚನ 13 (2)ರ ಅನ್ವಯ ದಿನಾಂಕ: 28.11.2014 ರಂದು ಪ್ರಕರಣ ದಾಖಲಿಸಿಕೊಂಡು, ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಧೀಶರು, ದಾವಣಗೆರೆ ಇವರಿಂದ ಅಗತ್ಯವಾದ ಶೋಧನಾ ವಾರೆಂಟ್‌ಗಳನ್ನು ಪಡೆದುಕೊಂಡು, ದಿನಾಂಕ: 29.11.2014 ರಂದು (1) ಆರೋಪಿತರು ಕುಟಂಬದವರೊಂದಿಗೆ ವಾಸವಿರುವ ಪ್ಲಾಟ್ ನಂ. 472, ಅರ್ಜುನ ಕಾಲೋನಿ, ರಾಣಿ ಚೆನ್ನಮ್ಮ ಬಡಾವಣೆ, ಬೆಳಗಾವಿ, (2) ಆರೋಪಿತರು ಕರ್ತವ್ಯ ನಿರ್ವಹಿಸುವ ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, (3) ಆರೋಪಿತರ ಮಾವನವರು ವಾಸವಾಗಿರುವ ಹೊಸದುರ್ಗದ ವಾಸದ ಮನೆ, (4) ಆರೋಪಿತರ ಮಗಳು ಕೆ.ಪಿ ಸ್ಮಿತಾ ಇವರು ವಾಸವಾಗಿರುವ ಪ್ಲಾಟ್ ನಂ. 201, ಮಹಾವೀರ ವರ್ಡ್ಸ್ ಅಪಾರ್ಟ್‌ಮೆಂಟ್, ಜೆ.ಪಿ ನಗರ ಬೆಂಗಳೂರು, (5) ಆರೋಪಿತರ ಹೆಸರಿನಲ್ಲಿರುವ ಮನೆ ನಂ. 3680, ಎಂ.ಸಿ.ಸಿ. 'ಬಿ' ದಾವಣಗೆರೆ ಮತ್ತು (6) ಆರೋಪಿತರ ಸಹೋದರಿ ಶ್ರೀಮತಿ ಉಮಾ ಜಗದೀಶ್ ಬಡಿಗೇರ ಇವರ ಬೈಲಹೊಂಗಲದಲ್ಲಿರುವ ವಾಸದ ಮನೆ ಈ ಸ್ಥಳಗಳನ್ನು ಪಂಚ ಸಾಕ್ಷಿಗಳ ಸಮಕ್ಷಮ ಶೋಧಿಸಿ ಮಹಜರು ಮಾಡಿ, ಪ್ರಕರಣದ ತನಿಖೆಗೆ ಪೂರಕವಾದ ಚರ ಮತ್ತು ಸ್ಥಿರಾಸ್ತಿಗಳ ಸಂಬಂಧಿತ ದಾಖಲಾತಿಗಳನ್ನು ವಶಪಡಿಸಿಕೊಂಡಿರುತ್ತಾರೆ.

ಆರೋಪಿತ ಅಧಿಕಾರಿಯ ವಿರುದ್ಧ ದಾಳಿ ಮಾಡಿದ ಸಮಯದಲ್ಲಿ ವಶಪಡಿಸಿಕೊಳ್ಳಲಾದ ಚರ ಮತ್ತು ಸ್ಥಿರಾಸ್ತಿಗಳ ವಿವರಗಳು, ಆರೋಪಿತರ ಮತ್ತು ಅವರ ಕುಟುಂಬದವರ ಖರ್ಚಿನ ವಿವರಗಳು, ಆರೋಪಿತರ ಕುಟುಂಬದ ಸದಸ್ಯರು ಹೊಂದಿರುವ ಆದಾಯದ ವಿವರ ಇವುಗಳ ಮಾಹಿತಿಯನ್ನು

ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ರವರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ನೀಡಿದ್ದು, ಪ್ರಾಥಮಿಕ ತನಿಖೆಯಿಂದ ಆರೋಪಿತರು ಗಳಿಸಿರುವ ಅಕ್ರಮ ಆಸ್ತಿಯ ವಿವರ ಕೆಳಕಂಡಂತೆ ನೀಡಲಾಗಿದೆ.

ಕ್ರ.ಸಂ	ವಿವರ	ಮೌಲ್ಯ ರೂ ಗಳಲ್ಲಿ
1	ಆರೋಪಿತರು ಈವರೆವಿಗೆ ಗಳಿಸಿರುವ ಒಟ್ಟು ಚರ ಮತ್ತು ಸ್ಥಿರಾಸ್ತಿಯ ಮೊತ್ತ	ರೂ. 1,52,36,263–28
2	ಆರೋಪಿತರು ಈವರೆಗೆ ಮಾಡಿರುವ ಅಂದಾಜು ಖರ್ಚಿನ ಮೊತ್ತ	ರೂ 60,47,813–72
3	ಆರೋಪಿತರ ಒಟ್ಟು ಆದಾಯದ ಮೊತ್ತ	ರೂ. 81,00,000–00
4	ಆರೋಪಿತರು ಈವರೆವಿಗೆ ಗಳಿಸಿದ ಆದಾಯಕ್ಕಿಂತ ಹೆಚ್ಚಿನ ಆಸ್ತಿಯ ಮೊತ್ತ	ರೂ. 1,31,83,987–00

ಆರೋಪಿತ ಅಧಿಕಾರಿಯು ಅವರ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಅಧಿಕ ಪ್ರಮಾಣದಲ್ಲಿ ಅಕ್ರಮ ಆಸ್ತಿಗಳನ್ನು ಗಳಿಸಿರುವುದು ಕಂಡು ಬಂದಿದ್ದು, ಭ್ರಷ್ಟಾಚಾರ ನಿರೋಧ ಕಾಯ್ದೆ 1988 ರ ಕಲಂ 13 (1) (ಇ) ಸಹವಾಚನ 13 (2) ಅನ್ವಯ ಅಪರಾಧಿಕ ದುರ್ನಡತೆ ಎಸಗಿರುವುದು ದೃಢಪಟ್ಟಿರುತ್ತದೆ.

ಮೇಲ್ಕಂಡ ಹಿನ್ನಲೆಯಲ್ಲಿ, ಆರೋಪಿತರು ತಮ್ಮ ಸ್ಥಾನದಲ್ಲಿಯೇ ಮುಂದುವರೆದರೆ, ಅವರ ಹುದ್ದೆಯ ಪ್ರಭಾವವನ್ನು ಬಳಸಿ ಪ್ರಕರಣದ ಸ್ವತಂತ್ರ, ಸುಗಮ ತನಿಖೆಗೆ ಅಡ್ಡಿಪಡಿಸುವ, ತನಿಖೆಯಲ್ಲಿ ಹಸ್ತಕ್ಷೇಪಮಾಡುವ ಮತ್ತು ಸಾಕ್ಷ್ಯಾಧಾರಗಳನ್ನು ತಿರುಚುವ/ನಾಶಪಡಿಸುವ ಸಾಧ್ಯತೆಗಳಿರುವುದರಿಂದ, ಸದರಿಯವರನ್ನು ಅಮಾನತ್ತಿನಲ್ಲಿಟ್ಟು, ಅವರ ಲೀನ್ ಅನ್ನು ಬೇರೆ ಕಡೆಗೆ ವರ್ಗಾಯಿಸುವಂತೆ ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತಮ್ಮ ಪ್ರಸ್ತಾವನೆಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಪ್ರಸ್ತಾವನೆಯೊಂದಿಗೆ ವಿಶೇಶ ತನಿಖಾ ವರದಿ, ಪ್ರಥಮ ವರ್ತಮಾನ ವರದಿ ಮತ್ತು ಮಹಜರ್‌ಗಳ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಕರ್ನಾಟಕ ಲೋಕಾಯುಕ್ತದಿಂದ ಮಾಡಲಾದ ಶಿಫಾರಸ್ಸನ್ನು ಸರ್ಕಾರವು ಪರಿಶೀಲಿಸಿ, ಶಿಫಾರಸ್ಸನ್ನು ಅಂಗೀಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 232 ಕೈಸೇವಿ 2014, ಬೆಂಗಳೂರು, ದಿನಾಂಕ: 12ನೇ ಮಾರ್ಚ್ 2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಕೆ.ಪಿ ಪರಮೇಶ್ವರಪ್ಪ, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಮನೆಯ ಮೇಲೆ ಮಾನ್ಯ ಲೋಕಾಯುಕ್ತರು ಧಾಳಿ ನಡೆಸಿದಾಗ ಇವರ ಮೇಲಿನ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಅಧಿಕ ಪ್ರಮಾಣದಲ್ಲಿ ಅಕ್ರಮ ಆಸ್ತಿ ಗಳಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿಯವರು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರ ಕಲಂ 13 (1) (ಇ) ಸಹವಾಚನ 13 (2) ಅನ್ವಯ ಅಪರಾಧಿಕ ದುರ್ನಡತೆ ಎಸಗಿರುವುದು ದೃಢಪಟ್ಟಿರುವುದರಿಂದ ಇವರನ್ನು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 10 (ಅಅ) ರನ್ವಯ, ಇವರ ಲೀನ್‌ಅನ್ನು ಜಂಟಿ ನಿರ್ದೇಶಕರು ಕೈಗಾರಿಕಾಭಿವೃದ್ಧಿ ಆಯುಕ್ತರ ಕಛೇರಿ ಬೆಂಗಳೂರು ಇಲ್ಲಿಗೆ ಬದಲಾಯಿಸಿ, ಸದರಿ ಅಧಿಕಾರಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿರಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯವರು ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಹಾಗೂ ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಸರ್ಕಾರದ ಪೂರ್ವಾನುಮತಿಯಿಲ್ಲದೆ ಕೇಂದ್ರಸ್ಥಾನ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು ಮತ್ತು ಸಮನ್ವಯ)

PR. 233
SC. 100

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಕಲ್ಬುರ್ಗಿ (ಗುಲ್ಬರ್ಗಾ) ನಗರದಲ್ಲಿರುವ ಸರ್ಕಾರಿ ಯುನಾನಿ ಚಿಕಿತ್ಸಾಲಯವನ್ನು ಕಲ್ಬುರ್ಗಿಯ ರೋಜಾ–(ಬಿ)ಯಲ್ಲಿ 50 ಹಾಸಿಗೆಗಳ ಯುನಾನಿ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.

ಓದಲಾಗಿದೆ: ಪತ್ರ ಆಯುಷ್ ನಿರ್ದೇಶಕರ ಸಂ:ಆಯುಷ್ 12(ಬಿಯುಡಿ(5)/2013–14 ದಿನಾಂಕ: 11.08.2014.

ಪ್ರಸ್ತಾವನೆ:

ಆಯುಷ್ ನಿರ್ದೇಶಕರು ಮೇಲೆ ಓದಲಾದ ಪತ್ರದಲ್ಲಿ ಕಲ್ಬುರ್ಗಿ (ಗುಲ್ಬರ್ಗಾ) ನಗರದಲ್ಲಿ ಯುನಾನಿ ವೈದ್ಯಕೀಯ ಪದ್ಧತಿಯಡಿಯಲ್ಲಿ ಚಿಕಿತ್ಸೆ ಪಡೆಯುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಹಾಗೂ ಯುನಾನಿ ಪದ್ಧತಿಯಲ್ಲಿ ಪರಿಣಾಮಕಾರಿಯಾದ ಚಿಕಿತ್ಸಾ ಸೌಲಭ್ಯ ಒದಗಿಸಲು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಸಲ್ಲಿಸಿದ ಬೇಡಿಕೆಯ ಹಿನ್ನೆಲೆಯಿಂದ ಹಾಲಿ ಕಲ್ಬುರ್ಗಿ ನಗರದ ರೋಜಾ–ಬಿ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಯುನಾನಿ ಚಿಕಿತ್ಸಾಲಯವನ್ನು 50 ಹಾಸಿಗೆಗಳ ಯುನಾನಿ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ ಯುನಾನಿ ಪದ್ಧತಿಯಲ್ಲಿ ಒಳ ಮತ್ತು ಹೊರರೋಗಿಗಳಿಗೆ ಸಮರ್ಪಕವಾದ ಚಿಕಿತ್ಸಾ ಸೌಲಭ್ಯವನ್ನು ನೀಡಲು ಉದ್ದೇಶ ಹೊಂದಿರುವುದಾಗಿಯೂ, ಜಿಲ್ಲಾಧಿಕಾರಿಗಳು, ಕಲ್ಬುರ್ಗಿ ಇವರು ಸಹಾ 1.20 ಎಕರೆ ಜಮೀನನ್ನು ಹಂಚಿಕೆ ಮಾಡಿದ್ದು ಈ ಪ್ರಸ್ತಾವನೆಗೆ ಕಲ್ಬುರ್ಗಿ ಜಿಲ್ಲಾ ಪಂಚಾಯತ್ ಸಹಾ ಅನುಮೋದಿಸಿರುವುದರಿಂದ ಕಲ್ಬುರ್ಗಿ ನಗರ ಹಾಗೂ ಸುತ್ತಮುತ್ತಲಿನ ಸಾರ್ವಜನಿಕರಿಗೆ ಯುನಾನಿ ಪದ್ಧತಿಯಲ್ಲಿ ಒಳರೋಗಿಗಳಿಗೆ ಚಿಕಿತ್ಸಾ ಸೌಲಭ್ಯ ಒದಗಿಸಲು ಯಾವುದೇ ಯುನಾನಿ ಆಸ್ಪತ್ರೆಗಳು ಇಲ್ಲದಿರುವುದರಿಂದ 50 ಹಾಸಿಗೆಗಳ ಯುನಾನಿ ಆಸ್ಪತ್ರೆಯನ್ನು ಹೊಸದಾಗಿ ತೆರೆಯುವ ಬದಲಾಗಿ ಹಾಲಿ ಇರುವ ಯುನಾನಿ ಚಿಕಿತ್ಸಾಲಯವನ್ನೇ ಮೇಲ್ದರ್ಜೆಗೇರಿಸಿ ಒಳ ಮತ್ತು ಹೊರರೋಗಿಗಳಿಗೆ ಸಮರ್ಪಕವಾದ ಚಿಕಿತ್ಸಾ ಸೌಲಭ್ಯ ನೀಡಬಹುದೆಂದು ತಿಳಿಸುತ್ತಾ ಈ ರೀತಿ ಮೇಲ್ದರ್ಜೆಗೇರಿಸಿದ್ದಲ್ಲಿ ಅವಶ್ಯಕವಾಗಿ ಬೇಕಾದ 36 ಹೆಚ್ಚುವರಿ ಸಿಬ್ಬಂದಿಗಳ ಸೃಜನೆಯೊಂದಿಗೆ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನೊಳಗೊಂಡಂತೆ ರೂ:1.68 ಕೋಟಿ ಖರ್ಚಾಗುವುದಾಗಿ, ಈ ವೆಚ್ಚವನ್ನು 2014–15ನೇ ಸಾಲಿನ ಜಿಲ್ಲಾ ಪಂಚಾಯತಿಯ ಲೆಕ್ಕಶೀರ್ಷಿಕೆ 2210–00–

101–0–41 ಯುನಾನಿ ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ ಯೋಜನೆ/ ಯೋಜನೇತರ ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸಬಹುದೆಂದು ಪ್ರಸ್ತಾಪಿಸಿ ಸರ್ಕಾರದ ಮಂಜೂರಾತಿ ಕೋರಿದ್ದಾರೆ.

ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಹೈದ್ರಾಬಾದ್–ಕರ್ನಾಟಕ ಪ್ರದೇಶದ ಕಲ್ಬುರ್ಗಿ ನಗರದಲ್ಲಿನ ರೋಜಾ–ಬಿ **ಹಜರತ್–ಖಾಜಾ–ಬಂದೇ–ನವಾಜ್** ದರ್ಗಾವು ಒಂದು ಪ್ರಸಿದ್ಧ ಯಾತ್ರಾ ಸ್ಥಳವಾಗಿರುವುದರಿಂದ ಈ ಯಾತ್ರಾ ಸ್ಥಳಕ್ಕೆ ದೇಶದ ಎಲ್ಲಾ ಭಾಗದಿಂದ ಧರ್ಮ ಮತ್ತು ಜಾತಿ ಭೇದವಿಲ್ಲದೆ ಬೃಹತ್ ಸಂಖ್ಯೆಯ ಭಕ್ತಾದಿಗಳು ಭೇಟಿ ನೀಡುತ್ತಿರುವುದರಿಂದ ಇದರಿಂದಾಗಿ ಇಲ್ಲಿ ಯುನಾನಿ ಪದ್ಧತಿಯಲ್ಲಿ ಹೊರರೋಗಿ ಮತ್ತು ಒಳರೋಗಿ ಚಿಕಿತ್ಸೆಗಾಗಿ ಬಹುಬೇಡಿಕೆ ಇದ್ದು, ಈ ಹಿನ್ನೆಲೆಯಲ್ಲಿ ಬಡರೋಗಿಗಳ ಚಿಕಿತ್ಸಾ ಸೌಲಭ್ಯಕ್ಕಾಗಿ, ಈ ವೈದ್ಯ ಪದ್ಧತಿಯನ್ನು ಉತ್ತೇಜಿಸುವ ಅವಶ್ಯಕತೆಯಿರುತ್ತದೆ. ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಯುನಾನಿ ಚಿಕಿತ್ಸಾಲಯದ ಹೊರರೋಗಿ ವಿಭಾಗದ ನಿರ್ವಹಣಾ ವಾರ್ಷಿಕ ವೆಚ್ಚ ರೂ:35.00ಲಕ್ಷಗಳಾಗಿದ್ದು, ಇದನ್ನು ಮೇಲಿನ ಜಿಲ್ಲಾ ಪಂಚಾಯತ್‌ನ ಲೆಕ್ಕಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ಭರಿಸಲಾಗುತ್ತಿದೆ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಯುನಾನಿ ಚಿಕಿತ್ಸಾಲಯವನ್ನು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ ರಾಜ್ಯವಲಯದ ಲೆಕ್ಕಶೀರ್ಷಿಕೆ 2210–02–101–2–04 ಯೋಜನೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಆಸ್ಪತ್ರೆಗಳ ಪ್ರಾರಂಭ ಮತ್ತು ನಿರ್ವಹಣೆ ಯೋಜನೆಯಡಿ ವರ್ಗಾಯಿಸಿಕೊಂಡು ಕಲ್ಬುರ್ಗಿ ನಗರದ ರೋಜಾ–ಬಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಯುನಾನಿ ಚಿಕಿತ್ಸಾಲಯವನ್ನು 50 ಹಾಸಿಗೆಗಳ ಯುನಾನಿ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ಉದ್ದೇಶಿಸಿ ಈ ಕೆಳಗಿನಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 390 ಪಿಐಎಂ 2014, ಬೆಂಗಳೂರು, ದಿನಾಂಕ:27.12.2014

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹೈದ್ರಾಬಾದ್–ಕರ್ನಾಟಕ ಭಾಗದ ಕಲ್ಬುರ್ಗಿ ನಗರದಲ್ಲಿ ಅಸ್ತಿತ್ವದಲ್ಲಿರುವ ಹೊರರೋಗಿ ಸೌಲಭ್ಯ ಹೊಂದಿರುವ ಸರ್ಕಾರಿ ಯುನಾನಿ ಚಿಕಿತ್ಸಾಲಯವನ್ನು ರಾಜ್ಯವಲಯದಡಿ 50 ಹಾಸಿಗೆಗಳ ಸರ್ಕಾರಿ ಯುನಾನಿ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿದೆ.

ಕಲ್ಬುರ್ಗಿ ನಗರದ 1.2 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ನೀಲಿನಕ್ಷೆ ಮತ್ತು ಅಂದಾಜುಪಟ್ಟಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯತಕ್ಕದ್ದು.

ಮೇಲ್ದರ್ಜೆಗೇರಿಸಿದ 50 ಹಾಸಿಗೆಗಳ ಸರ್ಕಾರಿ ಯುನಾನಿ ಆಸ್ಪತ್ರೆಯ ಕಾರ್ಯ ನಿರ್ವಹಣೆಗಾಗಿ ಒಟ್ಟು 36 ಹುದ್ದೆಗಳನ್ನು **"ಅನುಬಂಧ–ಎ"** ರಲ್ಲಿರುವಂತೆ ಸೃಜಿಸಲಾಗಿದೆ. ಈ ಹುದ್ದೆಗಳೊಂದಿಗೆ ಹಾಲಿ ಖಾಲಿ ಇರುವ ಹುದ್ದೆಗಳನ್ನು ಸಹ ಇಲಾಖೆಯ ವೃಂದ ಮತ್ತು ನೇಮಕಾತಿಗಳನುಸಾರ ಮತ್ತು ಅಗತ್ಯಕ್ಕನುಗುಣವಾಗಿ ತುಂಬತಕ್ಕದ್ದು.

ಸರ್ಕಾರಿ ಯುನಾನಿ ಆಸ್ಪತ್ರೆ, ಕಲ್ಬುರ್ಗಿ, ಇದರ ಸಿಬ್ಬಂದಿ ಮತ್ತು ನಿರ್ವಹಣಾ ವೆಚ್ಚ, ಆಸ್ಪತ್ರೆ ಕಟ್ಟಡ, ಔಷಧಿ, ಪೀಠೋಪಕರಣ ಮತ್ತು ಯಂತ್ರೋಪಕರಣಗಳಿಗಾಗಿ ಹಾಗೂ ಇತರೆ ಅಂದಾಜು ವೆಚ್ಚ ರೂ:754.84ಲಕ್ಷಗಳನ್ನು **"ಅನುಬಂಧ–ಬಿ"** ಲೆಕ್ಕಶೀರ್ಷಿಕೆ 2210–02–101–2–04 (ಯೋಜನೆ) ಜಿಲ್ಲಾ ಮತ್ತು ತಾಲೂಕು ಮಟ್ಟದ ಆಸ್ಪತ್ರೆಗಳ ಪ್ರಾರಂಭ ಮತ್ತು ನಿರ್ವಹಣೆ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ. ಮತ್ತು ಸಮನ್ವಯ)

ಅನುಬಂಧ–ಎ

50 ಹಾಸಿಗೆಗಳ ಯುನಾನಿ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸೃಜಿಸಬೇಕಾದ ಹೆಚ್ಚುವರಿ ಹುದ್ದೆಗಳ ವಿವರ

ಕ್ರಸಂ	ಹುದ್ದೆಗಳ ಪದನಾಮ	ಪ್ರಸ್ತುತ ಚಿಕಿತ್ಸಾಲಯದಲ್ಲಿ ಸೃಜನೆಯಾಗಿರುವ ಹುದ್ದೆಗಳು	50 ಹಾಸಿಗೆಗಳ ಆಸ್ಪತ್ರೆಗೆ ಅವಶ್ಯವಿರುವ ಹುದ್ದೆಗಳ ಸಂಖ್ಯೆ	ಹೆಚ್ಚುವರಿಯಾಗಿ ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ	ಸರಾಸರಿ ವೆಚ್ಚ	ಷರಾ
1	ಸ್ಥಾಯಿವೈದ್ಯಾಧಿಕಾರಿಗಳು (ಯು)	–	01	01	30400–51300	980400–00	
2	ಹಿರಿಯ ವೈದ್ಯಾಧಿಕಾರಿಗಳು(ಯು)	–	01	01	30400–51300	980400–00	
3	ವೈದ್ಯಾಧಿಕಾರಿಗಳು (ಯು)	02	03	02	28100–50100	938400–00	
4	ಶುಶ್ರೂಷಕಿಯರು	–	04	06	17650–32000	1787400–00	
5	ಔಷಧ ವಿತರಕರು	02	02	–	14550–26700		
6	ಜ್ಯೂ. ಲ್ಯಾಬ್ ಟೆಕ್ನಿಷಿಯನ್	–	01	01	14550–26700	247500–00	
7	ಕ್ಷ ಕಿರಣ ತಂತ್ರಜ್ಞರು	–	01	01	14550–26700	247500–00	
8	ಸಹಾಯಕ ಆಡಳಿತಾಧಿಕಾರಿಗಳು	–	01	01	21600–40050	369900–00	
9	ಕಛೇರಿ ಅಧೀಕ್ಷಕರು	–	01	01	20000–36300	337800–00	

ಕ್ರ.ಸಂ	ಹುದ್ದೆಗಳ ಪದನಾಮ	ಪ್ರಸ್ತುತ ಚಿಕಿತ್ಸಾಲಯದಲ್ಲಿ ಸೃಜನೆಯಾಗಿರುವ ಹುದ್ದೆಗಳು	50 ಹಾಸಿಗೆಗಳ ಆಸ್ಪತ್ರೆಗೆ ಅವಶ್ಯವಿರುವ ಹುದ್ದೆಗಳ ಸಂಖ್ಯೆ	ಹೆಚ್ಚುವರಿಯಾಗಿ ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ	ಸರಾಸರಿ ವೆಚ್ಚ	ಷರಾ
10	ಪ್ರಥಮ ದರ್ಜೆ ಸಹಾಯಕರು	–	02	02	14550–26700	495000–00	
11	ದ್ವಿತೀಯ ದರ್ಜೆ ಸಹಾಯಕರು / ಕಂಪ್ಯೂಟರ್ ಅಪರೇಟರ್	–	02	02	11600–21000	391200–00	
12	ಮಸಾಜಿಸ್ಟ್ (ಪು–2, ಮ–2)	–	04	04	10400–16400	643200–00	
13	ಕ್ಷ–ಕಿರಣ ಅಟೆಂಡರ್	–	01	01	10400–16400	160800–00	
14	ಪ್ರಯೋಗಶಾಲಾ ಅನುಚರ	–	01	01	10400–16400	160800–00	
15	ಕುಕ್	–	01	01	10400–16400	160800–00	
16	ಆಹಾರ ವಿತರಕರು	–	01	01	9600–14550	144900–00	
17	ಗ್ರೂಪ್ ಡಿ	02	03	01	9600–14550	144900–00	
18	ವಾರ್ಡ ಅಟೆಂಡರ್ (ಪು–3, ಮ–3)	–	06	06	9600–14550	869400–00	
19	ನೈರ್ಮಲ್ಯ ಪಾಲಕ	–	03	03	9600–14550	434700–00	
20	ಕಾವಲುಗಾರ	–	02	02	9600–14550	289800–00	
	ಒಟ್ಟು	**06**	**41**	**36**		**9784800–00**	

ಅನುಬಂಧ–ಬಿ

50 ಹಾಸಿಗೆಗಳ ಯುನಾನಿ ಆಸ್ಪತ್ರೆಗೆ ತಗಲುವ ಸರಾಸರಿ ಆರ್ಥಿಕ ವೆಚ್ಚವು ಈ ಕೆಳಕಂಡಂತಿರುತ್ತದೆ:–

(ಲಕ್ಷ ರೂ.ಗಳಲ್ಲಿ)

Sl. No.	Details	Budget Required	Proposed Head of Account
Non-Recurring Expr.			
1	Buildings, Furnitures/Fixtures etc.,	600.00	4210-03-101-1-01-139 (P)
2	Equipments	20.00	2210-02-101-2-04 (P)
	Recurring Expr.		
3	Salary	97.84	2210-02-101-2-04 (P)
4	Medicine	25.00	
5	Other Annual Office Expenses etc.	10.00	

ಆವರ್ತಕ ವೆಚ್ಚಗಳು ರೂ. 132.84 ಲಕ್ಷಗಳು

ಅನಾವರ್ತಕ ವೆಚ್ಚಗಳು ರೂ. 620.00 ಲಕ್ಷಗಳು

ಒಟ್ಟು **ರೂ. 752.84** ಲಕ್ಷಗಳು

ಬಿ.ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಭಾ.ವೈ.ಪ. ಮತ್ತು ಸಮನ್ವಯ)

PR. 138
SC. 100

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಸಚಿವಾಲಯ ನಿಯೋಜನೆ ಮೇಲೆ ತಹಶೀಲ್ದಾರ್, ವಿಜಯಪುರ, ಇವರ ವಿರುದ್ಧ ದಾಖಲಾಗಿರುವ ಲೋಕಾಯುಕ್ತ ಟ್ರ್ಯಾಪ್ ಪ್ರಕರಣ – ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ : ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ ಲೋಕ್/ಐಎನ್‌ವಿ(ಜಿ)/ಎಲ್–02/ಸಿಆರ್–02/2015/ವಿಜಯಪುರ, ದಿನಾಂಕ 7–2–2015.

ಪ್ರಸ್ತಾವನೆ :

ಮೇಲೆ ಓದಲಾದ ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದಲ್ಲಿ ಶ್ರೀ ರಮೇಶ ತಂದೆ ಹಣಮಂತ ಬಿದನೂರ, ಸಾ. ನವರಸಪುರ ಕಾಲನಿ, ವಿಜಯಪುರ ಇವರು ದಿನಾಂಕ 19–1–2015ರಂದು ವಿಜಯಪುರ ಲೋಕಾಯುಕ್ತ ಪೋಲೀಸ್‌ಠಾಣೆಗೆ ಹಾಜರಾಗಿ ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ (ಆರೋಪಿ–1) ಹಾಗೂ ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ (ಆರೋಪಿ–2) ಇವರುಗಳ ವಿರುದ್ಧ ದೂರು ನೀಡಿ, ತಮಗೆ ಭೂಮಿ ವಿಕಾಸ ಎಂಬ ಸಂಸ್ಥೆಯ ವತಿಯಿಂದ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಮಾರಾಟ ಮಾಡುವ ಸಲುವಾಗಿ ವಿಜಯಪುರ ತಾಲ್ಲೂಕಿನ ತೊರವಿ ಗ್ರಾಮದ ರಿ.ಸರ್ವೆ ನಂ. 580/2, 581/1, 581/2ಅ ಹಾಗೂ 581/2ಬ, 569/2ಎ ಜಮೀನುಗಳ ಭೂ ಬದಲಾವಣೆಗಾಗಿ ಭೂಸ್ವಾಧೀನ ಕಾಯಿದೆ ಕಲಂ 1960ರ 79(ಎ) ಹಾಗೂ (ಬಿ) ಉಲ್ಲಂಘನೆ ಆಗದಿರುವ ಬಗ್ಗೆ ಮತ್ತು ಸದರಿ ಜಮೀನುಗಳ ಪಿ.ಟಿ.ಸಿ.ಎಲ್. ಕಾಯಿದೆ ಉಲ್ಲಂಘನೆ ಆಗದಿರುವ ಬಗ್ಗೆ ಮಾನ್ಯ ತಹಶೀಲ್ದಾರ್, ವಿಜಯಪುರ ಇವರು ಪ್ರಮಾಣ ಪತ್ರ ನೀಡುವ ಸಲುವಾಗಿ ಸುಮಾರು 2–3 ತಿಂಗಳುಗಳಿಂದ ವಿಳಂಬ ಮಾಡುತ್ತಾ, ಗ್ರಾಮ ಲೆಕ್ಕಾಧಿಕಾರಿ ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ ಇವರ ಮುಖಾಂತರ ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ರೂ. 1,00,000 ಹಣದ ಬೇಡಿಕೆ ಇಟ್ಟಿದ್ದು, ತಮಗೆ ಲಂಚ ನೀಡಲು ಇಷ್ಟವಿಲ್ಲದ ಕಾರಣ ಸದರಿ ಅಧಿಕಾರಿ / ನೌಕರರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಕೋರಿದ್ದರೆಂದು ತಿಳಿಸಿರುತ್ತಾರೆ.

ಮುಂದುವರಿದು, ಫಿರ್ಯಾದುದಾರರಾದ ಶ್ರೀ ರಮೇಶ ತಂದೆ ಹಣಮಂತ ಬಿದನೂರ, ಸಾ. ನವರಸಪುರ ಕಾಲನಿ, ವಿಜಯಪುರ ಇವರು ಸಲ್ಲಿಸಿದ ದೂರನ್ನು ಶ್ರೀ ನಂದೀಶ್ವರ ಕುಂಬಾರ, ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ವಿಜಯಪುರ ಇವರು ವಿಜಯಪುರ ಲೋಕಾಯುಕ್ತ ಪೋಲೀಸ್‌ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 2/2015ರಲ್ಲಿ ಕಲಂ 7, ಲಂಚ ನಿರೋಧಕ ಕಾಯಿದೆ 1988ರ ಪ್ರಕಾರ ದಿನಾಂಕ 19–1–2015ರಂದು ಪ್ರಕರಣವನ್ನು ದಾಖಲಿಸಿ ಕೊಂಡು ತನಿಖೆ ಕೈಗೊಂಡಿದ್ದು, ದಿನಾಂಕ 19–1–2015ರಂದು ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರ ಸೂಚನೆಯ ಮೇರೆಗೆ ಆರೋಪಿ–2ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ವಿಜಯಪುರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿರುವ ಬಸವೇಶ್ವರ ಹೋಟೆಲ್ ಮುಂದೆ ಫಿರ್ಯಾದುದಾರರಿಂದ ಲಂಚದ ಹಣ ರೂ. 1,00,000ಗಳನ್ನು ಒತ್ತಾಯ ಮಾಡಿ ತಮ್ಮ ಬಲಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟಿನ ಎಡಜೇಬಿನಲ್ಲಿಟ್ಟುಕೊಂಡು ವಿಜಯಾಪುರ ಲೋಕಾಯುಕ್ತ ಪೋಲೀಸರ ಕೈಗೆ ಸಿಕ್ಕಿ ಬಿದ್ದಿರುವುದರಿಂದ ಈ ಪ್ರಕರಣದಲ್ಲಿ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಮತ್ತು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಮೇಲಿನ ಭ್ರಷ್ಟಾಚಾರದ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದಾಗಿ ತಿಳಿಸಿದ್ದು, ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಡಿಪಿಎಆರ್ 4 ಎಸ್‌ಡಿಇ 2000, ದಿನಾಂಕ 15–4–2002ರ ಹಿನ್ನೆಲೆಯಲ್ಲಿ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಮತ್ತು ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಇವರನ್ನು ಈ ಕೂಡಲೇ ಅಮಾನತ್ತಿನಲ್ಲಿ ಇಡಬೇಕೆಂದು ಹಾಗೂ ಇವರ ಲೀನ್ ಅನ್ನು ಬೇರೆಡೆಗೆ ವರ್ಗಾಯಿಸಬೇಕೆಂದು ಕೋರಿರುತ್ತಾರೆ.

ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಅವರು ತಮ್ಮ ಪತ್ರದೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಕಳುಹಿಸಿರುತ್ತಾರೆ :

1) ಫಿರ್ಯಾದುದಾರರೊಂದಿಗೆ ಆರೋಪಿತ ಅಧಿಕಾರಿ / ನೌಕರರು ನಡೆಸಿರುವ ದೂರವಾಣಿ ಸಂಭಾಷಣೆಯ ವಿವರಗಳನ್ನೊಳಗೊಂಡ ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯ ಪ್ರತಿ.
2) ಪ್ರಥಮ ವರ್ತಮಾನ ವರದಿಯ ಪ್ರತಿ.
3) ವಹಿಸಿಕೊಡುವ ಮತ್ತು ಹಣ ಜಪ್ತಿ ಪಂಚನಾಮೆಯ ಪ್ರತಿ
4) ಫಿರ್ಯಾದುದಾರರು ದಿನಾಂಕ 19–1–2015ರಂದು ಕರ್ನಾಟಕ ಲೋಕಾಯುಕ್ತದಲ್ಲಿ ಸಲ್ಲಿಸಿರುವ ದೂರಿನ ಪ್ರತಿ.
5) ಟ್ರ್ಯಾಪ್ ಪಂಚನಾಮೆಯ ಪ್ರತಿ.
6) ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ದಿನಾಂಕ 19–1–2015ರ ಹೇಳಿಕೆಯ ಪ್ರತಿ.

ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿರುವ ಮೇಲ್ಕಂಡ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ಫಿರ್ಯಾದುದಾರರೊಂದಿಗೆ ದಿನಾಂಕ 14–1–2015ರಂದು ನಡೆಸಿರುವ ದೂರವಾಣಿ ಸಂಭಾಷಣೆಯಲ್ಲಿ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಬಳಿ ನೀಡುವಂತೆ ಹಾಗೂ ಪಿ.ಟಿ.ಸಿ.ಎಲ್. ನ ಕಳಸ್ತಿನಿ ಇವತ್ತ ಎಂದು ಹೇಳಿರುವುದು ಕಂಡುಬರುತ್ತದೆ.

ದಿನಾಂಕ 19–1–2015ರಂದು ವಿಜಯಪುರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿರುವ ಬಸವೇಶ್ವರ ಹೋಟೆಲ್ ಬಳಿ ಫಿರ್ಯಾದುದಾರರಿಂದ ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ಫೆನಾಪ್ತಲೀನ್ ಪೌಡರ್ ಲೇಪಿಸಿರುವ ಲಂಚದ ಹಣ ರೂ. 1,00,000ಗಳನ್ನು ತಮ್ಮ ಬಲಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟಿನ ಎಡಜೇಬಿನಲ್ಲಿಟ್ಟುಕೊಂಡಿರುವುದು ಇದಕ್ಕೆ ಪಂಚ ನಂ. 1 ಇವರು ಸಾಕ್ಷಿಯಾಗಿದ್ದು, ನಂತರ ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ ಇವರ ಬಲಗೈಯನ್ನು ಶುದ್ಧವಾದ ನೀರು ಮತ್ತು ಸೋಡಿಯಂ ಕಾರ್ಬನೇಟ್ ಒಳಗೊಂಡ ದ್ರಾವಣದಲ್ಲಿ ಅದ್ದಿದ ನಂತರ ಬಲಗೈ ಬೆರಳುಗಳನ್ನು ತೊಳೆದ ಬಟ್ಟಲಿನಲ್ಲಿದ್ದ ದ್ರಾವಣವು ಕೆಂಪು ಗುಲಾಬಿ ಬಣ್ಣಕ್ಕೆ ಪರಿವರ್ತನೆ ಹೊಂದಿರುವುದು ಕಂಡುಬರುತ್ತದೆ.

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಪ್ಯಾಂಟಿನ ಎಡಕಿಸೆಯಿಂದ ರೂ. 1,00,000ಗಳ ಲಂಚದ ಹಣವನ್ನು ತೆಗೆದು ಸದರಿ ನೋಟುಗಳನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ಪರಿಶೀಲಿಸಿದ ಸಂದರ್ಭದಲ್ಲಿ ಸದರಿ ನೋಟುಗಳು ಈ ಹಿಂದೆ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ್ದ ನೋಟುಗಳೇ ಆಗಿರುವುದು ಕಂಡುಬರುತ್ತದೆ.

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ಫಿರ್ಯಾದಿಯಿಂದ ಪಡೆದ ಲಂಚದ ಹಣವನ್ನು ಪ್ಯಾಂಟಿನ ಎಡ ಕಿಸೆಯಲ್ಲಿ ಇಟ್ಟುಕೊಂಡಿದ್ದರಿಂದ ಆರೋಪಿಯು ಲಂಚದ ಹಣವನ್ನು ಇಟ್ಟುಕೊಂಡಿದ್ದ ಪ್ಯಾಂಟಿನ ಎಡಕಿಸೆಯನ್ನು ಹೊರಗೆ ಮಾಡಿ ಅದನ್ನು ಶುದ್ಧವಾದ ನೀರು ಮತ್ತು ಸೋಡಿಯಂ ಕಾರ್ಬನೇಟ್ ಒಳಗೊಂಡ ದ್ರಾವಣದಲ್ಲಿ ತೊಳೆದ ನಂತರ ದ್ರಾವಣವು ಕೆಂಪು ಗುಲಾಬಿ ಬಣ್ಣಕ್ಕೆ ಪರಿವರ್ತನೆ ಹೊಂದಿರುವುದು ಕಂಡುಬರುತ್ತದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರು ಫಿರ್ಯಾದಿಯಿಂದ ಕೇಳಿ ಪಡೆದಿರುವ ಲಂಚದ ಹಣದ ಬಗ್ಗೆ ಸಲ್ಲಿಸಿರುವ ತಮ್ಮ ಹೇಳಿಕೆಯಲ್ಲಿ ವಿಜಯಪುರ ತಾಲೂಕಿನ ತಹಶೀಲ್ದಾರರಾದ, ಶ್ರೀಮತಿ ಅಪರ್ಣಾ ಪಾವಟೆ ಇವರು ತಮಗೆ ದೂರವಾಣಿ ಮಾಡಿ ಶ್ರೀ ರಮೇಶ ಬಿದನೂರ ಇವರು ತಮ್ಮ ಕೈಯಲ್ಲಿ ರೂ. 1,00,000 ಹಣ ಕೊಡುತ್ತಾರೆ, ಅದನ್ನು ಅವರಿಗೆ ತಲುಪಿಸುವಂತೆ ತಿಳಿಸಿದ್ದರಿಂದ ದಿನಾಂಕ 19–1–2015ರ ಮಧ್ಯಾಹ್ನ ಶ್ರೀ ರಮೇಶ ಬಿದನೂರ ಇವರು ರೂ. 1,00,000 ಹಣ ಕೊಟ್ಟಿದ್ದು, ಯಾವ ಕೆಲಸಕ್ಕೆ ಅಂತಾ ತಮಗೆ ಗೊತ್ತಿಲ್ಲವೆಂದು ಹೇಳಿಕೆ ನೀಡಿರುವುದು ಕಂಡುಬರುತ್ತದೆ.

ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ ಇವರ ಹೇಳಿಕೆಯ ಬಗ್ಗೆ ಫಿರ್ಯಾದಿಯು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ ಇವರು ಬರೆದುಕೊಟ್ಟ ಹೇಳಿಕೆ ನಿಜವಾಗಿದ್ದು, ಭೂ ಬದಲಾವಣೆಗಾಗಿ ಭೂಸ್ವಾಧೀನ ಕಾಯಿದೆ ಉಲ್ಲಂಘನೆ ಆಗಿಲ್ಲದಿರುವ ಬಗ್ಗೆ ಪ್ರಮಾಣ ಪತ್ರವನ್ನು ನೀಡಲು ತಹಶೀಲ್ದಾರ್, ಶ್ರೀಮತಿ ಅಪರ್ಣಾ ಪಾವಟೆ ಇವರು ತಮ್ಮಿಂದ ರೂ. 1,00,000 ಹಣದ ಬೇಡಿಕೆ ಇಟ್ಟು ಸದರಿ ಲಂಚದ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಬಳಿ ನೀಡುವಂತೆ ಹೇಳಿರುವುದು ನಿಜವಾಗಿರುತ್ತದೆ ಎಂದು ಸಮುಜಾಯಿಷಿ ನೀಡಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಕಂಡುಬರುತ್ತದೆ.

ಶ್ರೀಮತಿ ಅಪರ್ಣಾ ಪಾವಟೆ ಇವರು ರೂ. 1,00,000ಗಳ ಹಣದ ಬಗ್ಗೆ ಸಲ್ಲಿಸಿರುವ ತಮ್ಮ ಹೇಳಿಕೆಯಲ್ಲಿ ತಮ್ಮ ಮೇಲೆ ಸುಳ್ಳು ಲಂಚದ ಆಪಾದನೆ ಮಾಡಲಾಗಿದ್ದು ತಾವು ತೊರವಿ ಗ್ರಾಮಕ್ಕೆ ಸಂಬಂಧಿಸಿದಂತೆ ಯಾವುದೇ ಲಂಚದ ಹಣ ಕೇಳಿರುವುದಿಲ್ಲ ಹಾಗೂ ಪಡೆದಿರುವುದಿಲ್ಲವೆಂದು ಹೇಳಿಕೆ ನೀಡಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಿಂದ ಕಂಡುಬರುತ್ತದೆ.

ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರಹೇಳಿಕೆಯ ಬಗ್ಗೆ ಫಿರ್ಯಾದುದಾರರಾದ ಶ್ರೀ ರಮೇಶ ತಂದೆ ಹಣಮಂತ ಬಿದನೂರ, ಸಾ. ನವರಸಪುರ ಕಾಲನಿ, ವಿಜಯಪುರ ಇವರು ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು ಇವರು ತಮ್ಮ ಕೆಲಸದ ವಿಷಯದಲ್ಲಿ ರೂ. 1,00,000ಗಳ ಲಂಚದ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಮುಖಾಂತರ ಬೇಡಿಕೆ ಇಟ್ಟಿರುವುದು ನಿಜವಾಗಿದ್ದು ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು ಇವರ ಹೇಳಿಕೆ ಸುಳ್ಳು ಎಂದು ತಿಳಿಸಿರುವುದು ಹಾಗೂ ಈ ಬಗ್ಗೆ ಪಂಚರ ಸಾಕ್ಷಿಗಳು ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ ಇವರು ಬರೆದುಕೊಟ್ಟಿರುವ ಸಮುಜಾಯಿಷಿಯು ಸತ್ಯಕ್ಕೆ ದೂರವಾಗಿರುತ್ತದೆ ಎಂದು ತಿಳಿಸಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಕಂಡುಬರುತ್ತದೆ.

ದಿನಾಂಕ 19–1–2015ರಂದು ರಾತ್ರಿ 20–45 ಗಂಟೆಗೆ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು ಮತ್ತು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ ಇವರನ್ನು ದಸ್ತಗಿರಿ ಮಾಡಿ ಗೌರವಾನ್ವಿತ ವಿಶೇಷ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಗೌರವಾನ್ವಿತ ವಿಶೇಷ ನ್ಯಾಯಾಲಯವು ಆರೋಪಿತರನ್ನು ನ್ಯಾಯಾಂಗ ಬಂಧನದಲ್ಲಿಡಲು ಆದೇಶಿಸಿರುವುದು ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿಯಲ್ಲಿ ಕಂಡುಬರುತ್ತದೆ.

ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರ ದಿನಾಂಕ 7–2–2015ರ ಪತ್ರದೊಂದಿಗೆ ಸ್ವೀಕೃತವಾಗಿರುವ ತನಿಖಾಧಿಕಾರಿಯವರ ಮಧ್ಯಕಾಲಿಕ ವರದಿ, ಪ್ರಥಮ ವರ್ತಮಾನ ವರದಿ, ಫಿರ್ಯಾದಿದಾರರೊಂದಿಗೆ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರ್ ಮತ್ತು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಿಗ ಇವರುಗಳು ನಡೆಸಿರುವ ದೂರವಾಣಿ ಸಂಭಾಷಣೆಯ ವಿವರಗಳನ್ನು ಹಾಗೂ ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಿಗ ಇವರು ನೀಡಿರುವ ಸ್ವರಕ್ಷಣಾ ಹೇಳಿಕೆ ಹಾಗೂ ಪಂಚರ ಸಾಕ್ಷಿಗಳ ಹೇಳಿಕೆ ಎಲ್ಲವನ್ನು ಪರಿಶೀಲಿಸಿದಾಗ ಆರೋಪಿ–1 ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರ್ ಇವರು ಫಿರ್ಯಾದುದಾರರಿಂದ ಭೂ ಬದಲಾವಣೆಗಾಗಿ ಭೂಸ್ವಾಧೀನ ಕಾಯಿದೆ ಉಲ್ಲಂಘನೆ ಆಗದಿರುವ ಬಗ್ಗೆ ಪ್ರಮಾಣ ಪತ್ರವನ್ನು ನೀಡಲು ಹಣದ ಬೇಡಿಕೆ ಇಟ್ಟು ಸದರಿ ಲಂಚದ ಹಣವನ್ನು ಆರೋಪಿ–2 ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ ಇವರ ಬಳಿ ನೀಡುವಂತೆ ಹೇಳಿರುವುದಕ್ಕೆ ಮೇಲ್ನೋಟದ ಸಾಕ್ಷ್ಯಗಳು ಇರುವುದು ಸರ್ಕಾರಕ್ಕೆ ಮನವರಿಕೆಯಾಗಿರುವುದರಿಂದ, ಪ್ರಕರಣದ ಸುಗಮ ತನಿಖೆಯ ಹಿತದೃಷ್ಟಿಯಿಂದ ಇವರನ್ನು ಸೇವೆಯಲ್ಲಿ ಮುಂದುವರಿಸುವುದು ಸಮಂಜಸವಲ್ಲವೆಂದು ನಿರ್ಣಯಿಸಿ ಸರ್ಕಾರವು ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಿಯೋಜನೆ ಮೇಲೆ ತಹಶೀಲ್ದಾರರು, ವಿಜಯಪುರ ಇವರನ್ನು ಮುಂದಿನ ತನಿಖೆ / ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿರಿಸಲು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 2 ಸೇಇವಿ 2015 ಬೆಂಗಳೂರು, ದಿನಾಂಕ 20ನೇ ಮಾರ್ಚ್ 2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಿಯೋಜನೆ ಮೇಲೆ ತಹಶೀಲ್ದಾರರು, ವಿಜಯಪುರ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(3)ರಡಿ ಓದಿಕೊಂಡಂತೆ, ಅದೇ ನಿಯಮಾವಳಿಯ 10(1)(ಎ) ದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಇವರ ವಿರುದ್ಧ ಶಿಸ್ತು ಕ್ರಮವನ್ನು ಬಾಕಿಯಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಿಯೋಜನೆ ಮೇಲೆ ತಹಶೀಲ್ದಾರರು, ವಿಜಯಪುರ ಇವರ ಲೀನ್ ಅನ್ನು ಕಂದಾಯ ಇಲಾಖೆಯಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ವರ್ಗಾಯಿಸಲಾಗಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಿಯೋಜನೆ ಮೇಲೆ ತಹಶೀಲ್ದಾರರು, ವಿಜಯಪುರ ಇವರು ಕೆ.ಸಿ.ಎಸ್.ಆರ್. ನಿಯಮ 98ರ ಅನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ ಹಾಗೂ ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಚಂದ್ರಶೇಖರ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು. ಇಲಾಖೆ (ಸೇವೆಗಳು–6)

PR. 262

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59